ಬೆಲೆ ರೂ.2.50
D.O.P - 15th of every month at Udupi Sorting Office

ಸ್ಥಾನಿಕ ಬ್ರಾಹ್ಮಣರ ವಿಶ್ವಕೋಶದಲ್ಲಿ ನಿಮ್ಮ ವಿಳಾಸವನ್ನು ನೋಂದಾಯಿಸಿರಿ
ನಿಮ್ಮ ಮೊಬೈಲ್‌ಗೆ
STHANIKA
PLAY STOREನಿಂದ STHANIKA ಆ್ಯಪನ್ನು ಡೌನ್‌ಲೋಡ್ ಮಾಡಿಕೊಳ್ಳಿ
ಸಮಾಜಬಾಂಧವರೊಡನೆ ಸದಾ ಸಂಪರ್ಕದಲ್ಲಿರಿ

# ಶ್ರೀ ಶಾರದಾ

ಮಾಸಪತ್ರಿಕೆ – 15 ಜೂನ್ 2019

॥ ಧಿಯೋ ಯೋನಃ ಪ್ರಚೋದಯಾತ್ ॥

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754

ಸಂಪುಟ-19 ಸಂಚಿಕೆ-6 ಪುಟಗಳು-10 Registered Under No.UDP/1260/2018-2020 Licenced to Post without Prepayment Licence No. SK/WPP/UDP/81/2018-20

## ಉಡುಪಿಯಲ್ಲಿ ಶ್ರೀ ಶಂಕರ ಜಯಂತಿ





ತಾ.09.05.2019ರ ಗುರುವಾರದಂದು ಉಡುಪಿ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘದ ಆಶ್ರಯದಲ್ಲಿ ಶ್ರೀ ಶಂಕರ ಜಯಂತಿಯ ಆಚರಣೆಯು ಜ್ಞಾನಮಂದಿರದಲ್ಲಿ ನೆರವೇರಿತು. ಬೆಳಗ್ಗೆ ಎಂಟು ಗಂಟೆಗೆ ಶ್ರೀ ಶಾರದಾ ದೇವಸ್ಥಾನದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಮಂಜುನಾಥ ಹೆಬ್ಬಾರ್, ಜೊತೆ ಕಾರ್ಯದರ್ಶಿ ಶ್ರೀ ಪ್ರಭಾಕರ ಭಂಡಿ, ಉಪಾಧ್ಯಕ್ಷರಾದ ಶ್ರೀ ಬಿ ಕೃಷ್ಣಮೂರ್ತಿ ರಾವ್ ಇತ್ಯಾದಿ ಪದಾಧಿಕಾರಿಗಳು ಸೇರಿ ದೇವಿಯ ಸಮ್ಮುಖದಲ್ಲಿ ಪ್ರಾರ್ಥನೆಯನ್ನು ನೆರವೇರಿಸಿದ ಬಳಿಕ ಮಹಿಳಾವೇದಿಕೆಯ ಸದಸ್ಯರು ಹಾಗೂ ಜ್ಞಾನಭಾರತಿ ಉಡುಪಿ ಇದರ ಮಹಿಳಾ ಸದಸ್ಯೆಯರಿಂದ ಭಜನಾ ಕಾರ್ಯಕ್ರಮವು ನೆರವೇರಿತು. ನಂತರ ಸ್ವಾಧ್ಯಾಯ ತಂಡದವರಿಂದ ಪಾರಾಯಣ ನಡೆಯಿತು ಶ್ರೀ ಶಂಕರಾಚಾರ್ಯರ ಮೂರ್ತಿಗೆ ಅಭಿಷೇಕ, ರುದ್ರಾಭಿಷೇಕ ಹಾಗೂ ಶ್ರೀ ಶಂಕರಾಚಾರ್ಯ ಅಷ್ಟೋತ್ತರ ಶತನಾಮಾವಳಿ ಪಾರಾಯಣದ ನಂತರ ಜ್ಞಾನಭಾರತಿ ಇದರ ಸಹಯೋಗೊಂದಿಗೆ ಸಭಾ ಕಾರ್ಯಕ್ರಮವು ನೆರವೇರಿತು. ಸಂಘದ ಸಲಹೆಗಾರರಾದ ಶ್ರೀ ಸಿ.ಎಸ್ ರಾಯರು ದೀಪ ಬೆಳಗಿಸಿ ಕಾರ್ಯಕ್ರಮಕ್ಕೆ ಚಾಲನೆಯಿತ್ತರು. ಖ್ಯಾತ ವೈದಿಕ ಹಾಗೂ ಸಂಸ್ಕೃತ ವಿದ್ವಾಂಸರಾದ ಬ್ರಹ್ಮಶ್ರೀ ಜಗದೀಶ ಉಪಾಧ್ಯಾಯರಿಂದ ಶ್ರೀಶಂಕರಾಚಾರ್ಯರ ಜೀವನದ ಬಗ್ಗೆ ಪ್ರವಚನ ನಡೆಯಿತು. ನಂತರ ಬ್ರಹ್ಮಶ್ರೀ ಜಗದೀಶ ಉಪಾಧ್ಯಾಯ ಹಾಗೂ ಬ್ರಹ್ಮಶ್ರೀ ಭವಾನಿಶಂಕರ ಉಪಾಧ್ಯಾಯರನ್ನು ಸನ್ಮಾನಿಸಲಾಯಿತು. ಜ್ಞಾನಭಾರತಿಯ ಕಾರ್ಯದರ್ಶಿಗಳಾದ ಶ್ರೀ ಎಸ್.ಎಲ್. ಕಾರ್ಣಿಕರವರು ಉಪಸ್ಥಿತರಿದ್ದರು. ಸಭಾ ಕಾರ್ಯಕ್ರಮದ ನಂತರ ಶ್ರೀ ಶಾರದಾ ದೇವಸ್ಥಾನದಲ್ಲಿ ಮಹಾಪೂಜೆಯಾಯಿತು ಹಾಗೂ ಪ್ರಸಾದ ಭೋಜನದೊಂದಿಗೆ ಕಾರ್ಯಕ್ರಮವು ಮುಕ್ತಾಯವಾಯಿತು

## ಪಾದೆಬೆಟ್ಟು ದೇವಸ್ಥಾನದಲ್ಲಿ ಶ್ರೀ ನರಸಿಂಹ ಜಯಂತಿ



ತಾ.17.05.2019ರಂದು ನರಸಿಂಹ ಜಯಂತಿ. ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇವಸ್ಥಾನದಲ್ಲಿ ಬ್ರಹ್ಮಶ್ರೀ ವಾಗೀಶ ತಂತ್ರಿಗಳ ನೇತೃತ್ವದಲ್ಲಿ ವಿಶೇಷಪೂಜೆಯು ವರ್ಷಂಪ್ರತಿಯಂತೆ ವಾರ್ಷಿಕ ಉತ್ಸವದಂತೆ ನೆರವೇರಿತು. ಬೆಳಗ್ಗೆ ಏಳುಗಂಟೆಗೆ ಕಲಶಾಭಿಷೇಕ ಇತ್ಯಾದಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನೆರವೇರಿದವು. ವಿಶೇಷ ಕಾರ್ಯಕ್ರಮವಾಗಿ ಶ್ರೀ ಶಾರದಾ ಭಜನಾ ಮಂಡಳಿ ಉಡುಪಿ ಹಾಗೂ ಪಡುಬಿದ್ರೆ ಮಹಿಳಾ ವೇದಿಕೆಯವರಿಂದ ಭಜನಾ ಕಾರ್ಯಕ್ರಮ ಜರಗಿತು. ಭಕ್ತರಿಂದ ವಿಷ್ಣು ಸಹಸ್ರನಾಮ ಪಾರಾಯಣ ನೆರವೇರಿತು. ಈ ಕಾರ್ಯಕ್ರಮಗಳು ಮುಗಿದ ನಂತರ ಸಭಾಕಾರ್ಯಕ್ರಮವನ್ನು ಏರ್ಪಡಿಸಲಾಯಿತು. ಈ ಸಮಾರಂಭದಲ್ಲಿ ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಗಳು, ಶ್ರೀ ಚಂದ್ರಕಾಂತ ರಾವ್ ಇನ್ನ, ಶ್ರೀ ಎಂ. ಕೆ. ಮೋಹನ ರಾವ್, ಶ್ರೀ ಬಿ.ಜಯರಾಮ ರಾವ್ ಉಪಸ್ಥಿತರಿದ್ದರು. ಬ್ರಹ್ಮಶ್ರೀ ಕೃಷ್ಣರಾಜ ಭಟ್ಟರವರಿಗೆ ವಿದ್ವತ್ ಸನ್ಮಾನ ನೆರವೇರಿತು. ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಗಳು ಧಾರ್ಮಿಕ ಉಪನ್ಯಾಸ ನೀಡಿ ಸನ್ಮಾನಿತರನ್ನು ಅಭಿನಂದಿಸಿದರು. ಶ್ರೀ ಬಿ ಜಯರಾಮ ರಾಯರು ಅತಿಥಿಗಳನ್ನು ಶಾಲು ಸ್ಮರಣಿಕೆ ಇತ್ತು ಗೌರವಿಸಿದರು. ಶ್ರೀಮತಿ ರಮ್ಯಾ ಅರುಣ್ ಕುಮಾರ್‌ರವರು ಧನ್ಯವಾದವಿತ್ತರು. ಶ್ರೀ ಅರುಣ್ ಕುಮಾರ್ ಕಾರ್ಯಕ್ರಮ ನಿರ್ವಹಿಸಿದರು. ಪ್ರಸಾದ ಭೋಜನದೊಂದಿಗೆ ಕಾರ್ಯಕ್ರಮವು ಮುಕ್ತಾಯವಾಯಿತು.

## ಶೃಂಗೇರಿ ಜಗದ್ಗುರುಗಳ ಭೇಟಿ



ಶೃಂಗೇರಿ ಜಗದ್ಗುರು ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳ ಶಿಷ್ಯರಾದ ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತೀ ಸನ್ನಿದಾನಂಗಳವರು ತಾ.31.05.2019ರಂದು ಪುತ್ತೂರಿನ ಶ್ರೀ ಮಠದಬೆಟ್ಟು ರಾಜರಾಜೇಶ್ವರೀ ದೇವಸ್ಥಾನಕ್ಕೆ ದಯಮಾಡಿಸಿದರು ಹಾಗೂ ದೇವಳದಲ್ಲಿ ನೂತನವಾಗಿ ನಿರ್ಮಿಸಿದ ಶ್ರೀ ಶ್ರೀ ಭಾರತೀ ಸಭಾಭವನವನ್ನು ಲೋಕಾರ್ಪಣೆ ಮಾಡಿದರು. ಅದೇ ಸಂದರ್ಭದಲ್ಲಿ ಪುತ್ತೂರಿನ ಹಿರಿಯನಾಗರಿಕರ ಹಾಗೂ ವಿದ್ಯಾರ್ಥಿಗಳ ನಿಲಯ ಶಿವಸದನಕ್ಕೂ ಭೇಟಿಯಿತ್ತು ಭಕ್ತರನ್ನು ಫಲಪುಷ್ಪ ಮಂತ್ರಾಕ್ಷತೆಯಿತ್ತು ಅನುಗ್ರಹಿಸಿ ಅನುಗ್ರಹ ಸಂದೇಶವನ್ನು ನೀಡಿದರು.


ತಂತ್ರಾಡಿ ವಿಶ್ವನಾಥ ಶಾನುಭೋಗ್
☎ 94487 24161
97417 85551
ಹರಿಕೃಷ್ಣ ಡಿಜಿಟಲ್ಸ್
ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ
"ಶ್ರೀರಂಗ", ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು, ಉಡುಪಿ – 576102
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

# ಸಂಪಾದಕೀಯ.....

- ಡಾ| ವೈ. ಸುದರ್ಶನ್ ರಾವ್

ಸುದೀರ್ಘವಾಗಿ ನಡೆದ ಲೋಕಸಭೆಯ ಚುನಾವಣೆಯ ಫಲಿತಾಂಶ ಕೊನೆಗೂ ಹೊರಬಂದಿದೆ. ಭಾರತೀಯ ಜನತಾ ಪಕ್ಷ ಎನ್ನುವುದಕ್ಕಿಂತಲೂ ಶ್ರೀ ನರೇಂದ್ರ ಮೋದಿಯವರು ಅಭೂತಪೂರ್ವ ಜನಾದೇಶ ಪಡೆದು ಪ್ರಧಾನ ಸೇವಕನ ಹುದ್ದೆಯಲ್ಲಿ ಮುಂದುವರಿಯುತ್ತಿದ್ದಾರೆ ಎನ್ನುವುದೇ ಸರಿ ಎನ್ನುವಂತಹಾ ಫಲಿತಾಂಶ ಈ ಬಾರಿಯದ್ದು. ಅವರು ಕಳೆದ ಐದು ವರ್ಷಗಳ ಅವಧಿಯಲ್ಲಿ ಸರಕಾರದ ಮಟ್ಟದಲ್ಲಿ ಭ್ರಷ್ಟಾಚಾರದ ಕಪ್ಪುಚುಕ್ಕೆಯಿಲ್ಲದ ಆಡಳಿತ ನೀಡಲು ಪ್ರಾಮಾಣಿಕವಾಗಿ ಶ್ರಮಿಸಿದ್ದು ಮಾತ್ರವಲ್ಲದೇ "ಡಿಜಿಟಲ್ ಇಂಡಿಯಾ" "ಮೇಕ್ ಇನ್ ಇಂಡಿಯಾ" "ಸ್ವಚ್ಛ ಭಾರತ" ಇತ್ಯಾದಿ ನೂರಾರು ಘೋಷಣೆಗಳು ಹಾಗೂ ಕಾರ್ಯಕ್ರಮಗಳ ಮೂಲಕ ಭಾರತದ ಅಭಿವೃದ್ಧಿಯ ಪಥವನ್ನು ಬೇರೇಯೇ ದಿಕ್ಕಿನಲ್ಲಿ ಕೊಂಡೊಯ್ಯುವ ಪ್ರಯತ್ನ ನಡೆಯುತ್ತಿದೆ ಎನ್ನುವ ಭರವಸೆ ಮತ್ತು ಭಾವನೆಯನ್ನು ಜನಮಾನಸದಲ್ಲಿ ಈ ಕಳೆದ ಐದು ವರ್ಷಗಳಲ್ಲಿ ಮೂಡಿಸಿದ್ದು ನಿಜ. ಹಾಗಾಗಿ ಈ ಬಾರಿ ಮೋದೀಜಿಯವರಿಗೆ ಬಿದ್ದ ಪ್ರತಿಯೊಂದು ಮತದ ಹಿಂದೆ ದೇಶ ಬದಲಾಗಬೇಕು, ಅಭಿವೃದ್ಧಿ ವೇಗವಾಗಿ ಆಗಬೇಕು, ನಮ್ಮ ದೇಶ ಸ್ವಾವಲಂಬಿ ಸ್ವಾಭಿಮಾನಿ ಹಾಗೂ ಸದೃಢಶಾಲಿಯಾಗಬೇಕು, ಭ್ರಷ್ಟಾಚಾರರಹಿತ ಆಡಳಿತ ಬೇಕು, ಅಪರಾಧಮುಕ್ತ ಸಮಾಜದ ನಿರ್ಮಾಣವಾಗಬೇಕು, ಅಬಲರಿಗೆ ಸಹಾಯ, ಯುವಕರಿಗೆ ಉದ್ಯೋಗ, ಉತ್ಸಾಹಿಗಳಿಗೆ ಪ್ರೋತ್ಸಾಹ ಸಿಗಬೇಕು ಎನ್ನುವ ತುಡಿತ ಇದೆ. ಪ್ರಜೆಗಳಿಗಿದ್ದ ಈ ಪ್ರಾಮಾಣಿಕ ತುಡಿತದ ಫಲಿತಾಂಶವಾಗಿ ಇಂದು ಮೋದಿಯವರು ಪುನ: ಪ್ರಧಾನಿಯಾಗಿದ್ದಾರೆ.

ಆದರೆ, ಮೋದಿಯವರು ಪ್ರಧಾನಿಯಾದ ಮಾತ್ರಕಷ್ಟೇ ಎಲ್ಲವೂ ತನ್ನಿಂತಾನಾಗಿಯೇ ಸರಿಹೋಗುತ್ತದೆಯೇ? ಪ್ರಧಾನಮಂತ್ರಿಯಿಂದ ಜನರು ಏನು ಬದಲಾವಣೆಗಳನ್ನು ಅಪೇಕ್ಷಿಸುತ್ತಿದ್ದಾರೋ ಅದಕ್ಕೆ ಪೂರಕವಾದ ಬದಲಾವಣೆಗಳನ್ನು ಸಮಾಜದ ಭಾಗವೇ ಆಗಿರುವ ಪ್ರಜೆಗಳಾದ ನಮ್ಮ ಜೀವನದಲ್ಲೂ ಆರಂಭಿಸಬೇಕಲ್ಲವೇ. ಹಾಗಿದ್ದರೆ ಮಾತ್ರ ಬದಲಾವಣೆ ಆದೀತಲ್ಲವೇ? ಆದುದರಿಂದ ಪ್ರಧಾನಮಂತ್ರಿಯ ಪ್ರಮಾಣವಚನದ ಸಂದರ್ಭದಲ್ಲಿ ಜನಸಾಮಾನ್ಯರಾದ ನಾವೂ ಕೂಡಾ ಕೆಲವು ಪ್ರಮಾಣಗಳನ್ನು ಸ್ವೀಕರಿಸುವ ಅಗತ್ಯವಿದೆ. ಅಲ್ಲವೇ?

ಲಂಚ ತೆಗೆದುಕೊಳ್ಳದಿರುವುದು ಹಾಗೂ ಲಂಚ ನೀಡದಿರುವುದು, ಕಸವನ್ನು ಎಲ್ಲೆಲ್ಲಿ ಬಿಸಾಕದೆ ಅಥವಾ ಸುಡದೆ ವೈಜ್ಞಾನಿಕವಾಗಿ ವಿಲೇವಾರಿ ಮಾಡುವುದು, ಎಲ್ಲೆಂದರಲ್ಲಿ ಉಗುಳುವುದು ಹಾಗೂ ಬಯಲಿನಲ್ಲಿ ಮಲಮೂತ್ರ ವಿಸರ್ಜಿಸುವುದನ್ನು ನಿಲ್ಲಿಸುವುದು, ನೀರಿನ ಮೂಲಗಳನ್ನು ಕಲುಷಿತಗೊಳಿಸದಿರುವುದು, ಭೂಮಾಲಿನ್ಯ ವಾಯುಮಾಲಿನ್ಯಗಳು ತನ್ನಿಂದಾಗದಂತೆ ನೋಡಿಕೊಳ್ಳುವುದು, ಅಂತರ್ಜಲ ವೃದ್ದಿಗೆ, ಗಿಡಮರಗಳನ್ನು ಬೆಳೆಸುವುದಕ್ಕೆ ಹಾಗೂ ಸೌರಶಕ್ತಿಯ ಉತ್ಪಾದನೆಗೆ ತನ್ನ ಮನೆಯಲ್ಲಿಯೂ ಆದ್ಯತೆ ನೀಡುವುದು, ಎಲ್ಲಾ ಜನರು ಧರ್ಮ, ಜಾತಿ, ದೇವರು, ನಂಬಿಕೆಗಳಿಗೆ ಗೌರವ ನೀಡುವುದು, ಇತರರನ್ನು ಮೋಸಗೊಳಿಸಿ ಧನ ಸಂಪಾದಿಸುವ ಬುದ್ಧಿಯನ್ನು ತ್ಯಜಿಸುವುದು, ಸರಕಾರಕ್ಕೆ ಸಲ್ಲಬೇಕಾದ ತೆರಿಗೆಗಳನ್ನು ವಂಚನೆಯಿಲ್ಲದೆ ಪಾವತಿಸುವುದು, ಸಂವಿಧಾನಕ್ಕೆ ಹಾಗೂ ಕಾನೂನಿಗೆ ಬದ್ಧವಾಗಿ ನಡೆದುಕೊಳ್ಳುವುದು ಇವೇ ಕೆಲವು ನಾವು ಮಾಡಬೇಕಾಗಿರುವ ಪ್ರಮಾಣಗಳಿಗೆ ಉದಾಹರಣೆಗಳು.

ಹೀಗೆ ಇಂತಹ ಹಲವಾರು ಬದಲಾವಣೆಗಳನ್ನು ನಾವು ಪ್ರಜೆಗಳಾಗಿ ಸ್ವಯಂಪ್ರೇರಿತರಾಗಿ ಕೈಗೊಳ್ಳದಿದ್ದರೆ ನಾವು ಮೋದಿಯಿಂದಾದೀತು ಎಂದು ಅಪೇಕ್ಷಿಸಿದ ಬದಲಾವಣೆಗಳು ಮರೀಚಿಕೆಯಾಗಿಯೇ ಉಳಿದಾವು. ಅಥವಾ ಈ ಬದಲಾವಣೆಗಳನ್ನು ಅವರು ನಮ್ಮ ಮೇಲೆ ಒತ್ತಾಯವಾಗಿ ಹೇರಲೂ ಬೇಕಾಗಬಹುದು. ಇಂತಹಾ ಒತ್ತಾಯದ ಹೇರಿಕೆಗೆ ಸ್ಪಷ್ಟ ಉದಾಹರಣೆ ಅವರು ಕಳೆದ ಬಾರಿ ಕೈಗೊಂಡ ರೂಪಾಯಿ ನೋಟಿನ ಅಮಾನೀಕರಣ. ಪ್ರಾಮಾಣಿಕವಾಗಿ ತೆರಿಗೆ ಪಾವತಿಸಿ ಎಂದು ಹಲವಾರು ಬಾರಿ ಮನವಿ ಮಾಡಿದರೂ, ತೆರಿಗೆ ತಪ್ಪಿಸಿದವರಿಗೆ ದಂಡ ಪಾವತಿಸಿ ಸಕ್ರಮಗೊಳಿಸುವ ಯೋಜನೆ ತಂದರೂ, ಜನರು ಕ್ಯಾರೇ ಅನ್ನದಿದ್ದಾಗ ನೋಟಿನ ಅಮಾನೀಕರಣ ವಾಗಲೇಬೇಕಾಯ್ತು. ಇದರ ಬಗ್ಗೆ ಯಾರೇ ಎಷ್ಟೇ ಹುಯಿಲೆಬ್ಬಿಸಿದರೂ, ಈ ಕ್ರಮವು ಆರ್ಥಿಕ ಶಿಸ್ತನ್ನು ಜಾರಿಗೆ ತರಲು ನೀಡಿದ ಛಡಿಯೇಟಾಗಿತ್ತು ಎನ್ನುವುದು ನಿಜ. ಬದಲಾವಣೆ ಬೇಕು ಎನ್ನುವಾಗ ಬೇರೆಯವರು ಬೇಕಾದರೆ ಬದಲಾಗಲಿ ತಾನು ಇದ್ದಂತೆ ಇರುತ್ತೇನೆ ಎನ್ನುವ ಧೋರಣೆ ಇರುವವರಿಗೆ ಪುನಃ ಇಂತದೇ ಇನ್ನೊಂದು ಛಡಿಯೇಟು ಬಿದ್ದೀತೇ? ಸಾಧ್ಯತೆ ಇದ್ದೇ ಇದೆ. ಅಲ್ಲವೇ?

ಬೇಡ ನಾವು ಬದಲಾಗೋಣ, ದೇಶಕ್ಕಾಗಿ ಸ್ವಸ್ಥ ಸಮಾಜಕ್ಕಾಗಿ ಸ್ವಯಂ ಪ್ರೇರಿತರಾಗಿ ಕಾರ್ಯಕ್ರಮ ಹಮ್ಮಿಕೊಳ್ಳೋಣ. ಈ ಬಾರಿಯ ಮಳೆಗಾಲದಲ್ಲಿ ನಮ್ಮಿಂದಾದಷ್ಟು ಸಸಿಗಳನ್ನು ನೆಡುವ ಮೂಲಕ ಶುದ್ಧ ವಾತಾವರಣಕ್ಕೂ ನಮ್ಮ ಮನೆಯಂಗಳದ ಮೂಲೆಯಲ್ಲಿ ಇಂಗುಗುಂಡಿ ನಿರ್ಮಿಸಿ ಅಂತರ್ಜಲ ವೃದ್ಧಿಗೂ ಕಾಣಿಕೆ ನೀಡುವುದರೊಂದಿಗೆ ಬದಲಾವಣೆಯ ಪಥದತ್ತ ಮೊದಲ ಹೆಜ್ಜೆ ಹಾಕೋಣ.


**ಸಂಪಾದಕ ಮಂಡಳಿ**

ಡಾ| ವೈ. ಸುದರ್ಶನ ರಾವ್, ಕುಕ್ಕಿಕಟ್ಟೆ
ಶ್ರೀ ಸುರೇಶ್ ಶ್ಯಾನುಭಾಗ್, ಇಂದ್ರಾಳಿ
ಶ್ರೀ ಟಿ. ಸುರೇಶ್ ರಾವ್, ನಿಟ್ಟೂರು
ಶ್ರೀ ಪ್ರಭಾಕರ ಭಂಡಿ, ಪೆರ್ಡೂರು
ಶ್ರೀ ವೈ. ಭುವನೇಂದ್ರ ರಾವ್, ಕೊರಂಗ್ರಪಾಡಿ



ಕಳೆದ ತಿಂಗಳಿನ ಶ್ರೀ ಶಾರದಾ ಪತ್ರಿಕೆಯ ಮುದ್ರಣ ಹಾಗೂ ಅಂಚೆ ರವಾನೆ ವೆಚ್ಚ ಸಹಿತ ಸಂಪೂರ್ಣ ಪ್ರಾಯೋಜಕತ್ವವನ್ನು ನಮ್ಮ ಪತ್ರಿಕೆಯ ಮಹಾಪೋಷಕರಾದ ಬೆಂಗಳೂರಿನ ಶ್ರೀ ಪಿ ಬಾಲಕೃಷ್ಣ ಮತ್ತು ಸಾವಿತ್ರಿ ದಂಪತಿಗಳು ಪ್ರಾಯೋಜಿಸಿದ್ದಾರೆ. ಅವರಿಗೆ ಸಂಘದ ಪರವಾಗಿ ಅನಂತಾನಂತ ಧನ್ಯವಾದಗಳು



*Power Cut !!!???*
*Install Best Quality Inverters...*
Mobile : 9483242111
K.Suresh Rao : 9036443884
Tel : 0820-2523436



**DEEPA ENTERPRISES**
Business Complex, Ground Floor,
Near Telephone Exchange, Hotel Udupi Residency Road,
Udupi-576101.
Inverters, UPS, Batteries, Repairs Maintenance & Charging






*With Best Compliments from :*



*Dr. Sanath S. Rao*
M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST
Clinic : 0820-6529474
Mobile : 9886093199
drsanathrao@gmail.com

**JALAJA SKIN CARE AND COSMETOLOGY CLINIC**
Sai Harsha Square, Koladapete (Thenkapete), Old Post Office Road, Udupi - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.
Also available at Lalith Hospital (12-30 a.m. to 2-00 p.m.)






ಸಮಯ ಬೆಳಗ್ಗೆ 7:00 ರಿಂದ ರಾತ್ರಿ 10:30 ರ ವರೆಗೆ

ಆದರದ ಸ್ವಾಗತ ಬಯಸುವ


ಹೋಟೆಲ್ ವೃಂದಾವನ, ಕದ್ರಿ, ಮಂಗಳೂರು | ವಿನೀತ್ ಮೆಡಿಕಲ್ಸ್, ಪಡುಬಿದ್ರಿ | ವಿಶ್ವ ಟ್ರಾನ್ಸ್‌ಪೋರ್ಟ್, ಮಂಗಳೂರು | ಶ್ರೀಮತಿ ಮಧುರಾ ವ್ಯಾಸರಾಜ್ ರಾವ್, ಶ್ರೀ ಧವಳ ಎಲ್ಲೂರು

ಬನ್ನಿ... ಶುಭ ನುಡಿದು ಪ್ರೋತ್ಸಾಹಿಸಿ...

ಉತ್ತರ ಹಾಗೂ ದಕ್ಷಿಣ ಭಾರತೀಯ ಶೈಲಿಯ ಖಾದ್ಯಗಳು.

ವಿಶಾಲ ಹೊರಾಂಗಣ ಹಾಗೂ ಒಳಾಂಗಣ ವ್ಯವಸ್ಥೆಯ ಉಪಾಹಾರ ಗೃಹ

ವಿಶಾಲ ಪಾರ್ಕಿಂಗ್ ವ್ಯವಸ್ಥೆ



# ಸುರತ್ಕಲ್‌ನಲ್ಲಿ ಶ್ರೀ ಶಂಕರ ಜಯಂತಿ



ಇದೇ ಕಳೆದ ತಾ.12.05.2019ನೇ ರವಿವಾರ ಸಂಜೆ ಸುರತ್ಕಲ್ ಸಂಘದ ವತಿಯಿಂದ ಶ್ರೀ ಗೋವಿಂದದಾಸ ಕಾಲೇಜಿನ ಎದುರುಗಡೆ ಇರುವ ಶ್ರೀ ಜಿ.ಕೆ.ಯವರ ಮಾನಸ ಕಟ್ಟಡದ ಮೇಲೆ ವಿವೇಕಾನಂದ ಸಭಾಗೃಹದಲ್ಲಿ ಶ್ರೀ ಶಂಕರ ಜಯಂತಿಯ ಕಾರ್ಯಕ್ರಮವನ್ನು ಆಚರಿಸಲಾಯಿತು.

ಸಂಜೆ 3.00ಕ್ಕೆ ಸರಿಯಾಗಿ ಶ್ರೀ ಶಶಿಧರ್ ರಾವ್ ಚಿತ್ರಾಪು ಮತ್ತು ಅವರ ಬಳಗದವರಿಂದ ಶ್ರೀ ಶಂಕರ ವಿಜಯ ಎಂಬ ಕಥಾಭಾಗದ ತಾಳಮದ್ದಳೆಯು ಶಂಕರ ಭಗತ್ಪಾದರ ಭಕ್ತಾದಿಗಳ ಮನಸ್ಸನ್ನು ಆಕರ್ಷಿಸಿತು. ಸಂಜೆ 5.45ಕ್ಕೆ ಸರಿಯಾಗಿ ಮಂಗಲವಾದ ಬಳಿಕ ತಾಳಮದ್ದಲೆಯ ತಂಡದವರನ್ನು ನಮ್ಮ ಸಂಘದ ಅಧ್ಯಕ್ಷರಾದ ಶ್ರೀ ಕೆ. ಮಾಧವ್ ರಾವ್ ಇವರು ಗೌರವಿಸಿದರು.

ನಂತರ ರವಿ ಉಪಾಧ್ಯಾಯ ಪಾವಂಜೆ ಇವರ ನೇತೃತ್ವದಲ್ಲಿ ಶ್ರೀ ಶಂಕರ ಜಯಂತಿಯ ಪೂಜಾ ವಿಧಿವಿಧಾನಗಳು ನಡೆದವು. ಈ ಸಂದರ್ಭದಲ್ಲಿ ಮಹಿಳಾ ವೇದಿಕೆಯ ಹಾಗೂ ಸಮಾಜ ಬಾಂಧವರಿಂದ ಶ್ರೀ ಶಂಕರರ ಅಷ್ಟೋತ್ತರ ಶತನಾಮಾವಳಿ ಪಠಣ, ಭಜನೆ ನೆರವೇರಿತು. ಸಂಜೆ 7 ಗಂಟೆಗೆ ಸರಿಯಾಗಿ ಮಂಗಳಾರತಿಯಾದ ಬಳಿಕ ಪ್ರಸಾದ ವಿತರಣೆಯಾಯಿತು.

ಅನಂತರ ಬಂದಿದ್ದ ಸಮಾಜ ಬಾಂಧವರಿಗೆ ಉಪಹಾರವನ್ನು ನೀಡಲಾಯಿತು. ಈ ಸಂದರ್ಭದಲ್ಲಿ ಉಪಾಧ್ಯಕ್ಷರಾದ ಶ್ರೀ ಎಮ್. ವಾಸುದೇವ ಶಾನುಭೋಗ್, ಶ್ರೀ ಗೋಪಾಲಕೃಷ್ಣ, ಕಾರ್ಯದರ್ಶಿಗಳಾದ ಶ್ರೀ ಎಮ್.ಪಾಲಚಂದ್ರ ಶರ್ಮ, ಕೋಶಾಧಿಕಾರಿಗಳಾದ ಶ್ರೀ ರಾಘವೇಂದ್ರ ರಾವ್, ಮಹಿಳಾ ವೇದಿಕೆಯ ಹಾಗೂ ಯುವ ವೇದಿಕೆಯ ಅಧ್ಯಕ್ಷರು ಶ್ರೀ ಸುಕುಮಾರ್ ಹಾಗೂ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಕಾರ್ಯಕ್ರಮದ ಕೊನೆಗೆ ಸಂಘದ ಕಾರ್ಯದರ್ಶಿಯವರು ಈ ಕಾರ್ಯಕ್ರಮ ನಡೆಸಲು ಸ್ಥಳಾವಕಾಶ ಮಾಡಿಕೊಟ್ಟ ಶ್ರೀ ಗೋಪಾಲಕೃಷ್ಣ ಇವರಿಗೂ ಉಪಾಹಾರದ ವ್ಯವಸ್ಥೆ ಮಾಡಿರುವ ಶ್ರೀ ಪ್ರವೀಣ್ ಕುಮಾರ್ ಬಳಗಕ್ಕೂ ಹಾಗೂ ಸಹಕರಿಸಿದ ಎಲ್ಲರಿಗೂ ಧನ್ಯವಾದಗಳನ್ನಿತ್ತರು.

–ಅಧ್ಯಕ್ಷರು ಸ್ಥಾನಿಕ ಬ್ರಾಹ್ಮಣ ಸಂಘ ಸುರತ್ಕಲ್

# ಪಾದೆಬೆಟ್ಟಿನಲ್ಲಿ ಶ್ರೀ ಶಂಕರ ಜಯಂತಿ, ಸತ್ಸಂಗ




ತಾ 09–05–2019ರಂದು ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇವಸ್ಥಾನದಲ್ಲಿ ಶಂಕರ ಜಯಂತಿ ನೆರವೇರಿತು. ಬೆಳಗ್ಗೆ ಪಡುಬಿದ್ರೆ ಸ್ಥಾನಿಕ ಬ್ರಾಹ್ಮಣ ಸಭಾದ ಮಹಿಳಾ ಸದಸ್ಯೆಯರಿಂದ ಶ್ರೀ ಶಂಕರಾಚಾರ್ಯ ಅಷ್ಟೋತ್ತರ ಶತನಾಮ ಪಾರಾಯಣ ನೆರವೇರಿತು. ನಂತರ ದೇವಳದ ಅರ್ಚಕರಾದ ಶ್ರೀ ಜಗಧಾಭಿರಾಮರವರಿಂದ ಶ್ರೀ ಶಂಕರಾಚಾರ್ಯರ ಅಲಂಕೃತ ಚಿತ್ರಕ್ಕೆ ಪೂಜೆ ಸಲ್ಲಿಸಲಾಯಿತು. ನಂತರ ನಡೆದ ಸಭಾಕಾರ್ಯಕ್ರಮದಲ್ಲಿ ಶ್ರೀ ಶಾರದಾ ಪತ್ರಿಕೆಯ ಸಂಪಾದಕರಾದ ಡಾ| ವೈ. ಸುದರ್ಶನ್ ರಾವ್‌ರವರು ಸತ್ಸಂಗ ಕಾರ್ಯಕ್ರಮವನ್ನು ನಡೆಸಿಕೊಟ್ಟು ಅದರಲ್ಲಿ ಶ್ರೀ ಶಂಕರಾಚಾರ್ಯರ ಜೀವನ ಚರಿತ್ರೆ, ಅವರಿಂದ ಸನಾತನ ಧರ್ಮ ಪುನರುತ್ಥಾನಗೊಂಡ ಬಗ್ಗೆ , ಅವರು ಪ್ರತಿಪಾದಿಸಿದ ಸಮಸ್ತ ಜೀವಕೋಟಿಯನ್ನು ಸಮಾನವಾಗಿ ಕಾಣುವ ಅದ್ವೈತ ತತ್ವದ ಬಗ್ಗೆ, ಅವರು ಜಾರಿಗೆ ತಂದ ಎಲ್ಲಾ ದೇವರುಗಳನ್ನು ಸಮಾನವಾಗಿ ಕಾಣುವ ಪಂಚಾಯತನ ಪೂಜಾ ಪದ್ಧತಿಯ ಬಗ್ಗೆ, ಅವರು ದೇಶದ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಅಮ್ನಾಯ ಪೀಠಗಳನ್ನು ಸ್ಥಾಪಿಸಿ ಸನಾತನ ಧರ್ಮವನ್ನು ಇಂದಿನವರೆಗೂ ಉಳಿಸಿಕೊಟ್ಟ ಬಗ್ಗೆ ವಿವರಿಸಿದರು. ಸಭಾದ ಅಧ್ಯಕ್ಷರಾದ ಶ್ರೀ ಎಂ.ಕೆ ಮೋಹನ್ ರಾವ್ ದೇವಳದ ಮೊಕ್ತೇಸರ ಶ್ರೀ ಬಿ ಜಯರಾಮರಾವ್ ಮುಂಡ್ಕೂರು ಅನ್ನಪೂರ್ಣೇಶ್ವರೀ ದೇವಳದ ಮೊಕ್ತೇಸರ ಶ್ರೀ ಬಿ.ವಿ.ರಾವ್ ಉಪಸ್ಥಿತರಿದ್ದರು. ಮಹಾಪೂಜೆಯ ನಂತರ ಅನ್ನಸಂತರ್ಪಣೆಯೊಂದಿಗೆ ಕಾರ್ಯಕ್ರಮವು ಮುಕ್ತಾಯವಾಯಿತು.

Ph : 98459 92859
Ganesh Hebbar & Associates
CHARTERED ACCOUNTANT
S.M.S.P. Complex, Udupi - 576 101.

## ಶ್ರೀಶಾರದಾ ವೇದಿಕೆಯ ಮಹಾಪೋಷಕರು

ದಿ| ಅಂಬಲಪಾಡಿ ಕೃಷ್ಣರಾವ್, ಡಾ| ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ| ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಆಲೆವೂರು, ವೈ. ಮುರಳೀಕೃಷ್ಣರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ದಿ| ಡಾ| ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ , ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ| ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ| ತಂತ್ರಾಡಿ ನಾರಾಯಣ ಶ್ಯಾನುಭಾಗ್, ಶ್ರೀಮತಿ ಮಾಲತಿ ಶಿವರಾವ್ ಮಣಿಪಾಲ, ವೈ. ಶಂಕರನಾರಾಯಣರಾವ್ ಪಡುಬಿದ್ರಿ, ವೈ. ಮೋಹನ ರಾವ್ ಅಂಬಲಪಾಡಿ, ಬೆಳ್ಳೆ ಶ್ರೀನಿವಾಸ ರಾವ್ ಮುಂಬೈ, ಡಾ| ವೈ. ಸುದರ್ಶನ ರಾವ್ ಕುಕ್ಕಿಕಟ್ಟೆ , ಕಟ್ಟೆ ವೆಂಕಟ್ರಾವ್ ಪಲಿಮಾರು, ಮಟ್ಟು ದಿವಾಕರ ರಾವ್ ಮುಂಬಯಿ, ಕೆ.ಉಮೇಶ್ ರಾವ್ ಕುಡಾಲ್, ಕೆ.ವೆಂಕಟರಮಣರಾವ್ ಕುಡಾಲ್, ಕಡಂದಲೆ ಶ್ರೀಪತಿ ರಾವ್ ಅಧಿಕಾರಿ ಮುಂಬೈ, ಅಂಬಲ್ಪಾಡಿ ರಾಘವೇಂದ್ರ ರಾವ್ ಬೆಂಗಳೂರು, ಅದ್ಯಪಾಡಿ ವಸಂತ ಕುಮಾರ್, ಎಸ್.ಉಮೇಶ್ ರಾವ್ ಮಾಣಿಬೆಟ್ಟು , ಶ್ರೀಮತಿ ಸವಿತಾ ಮೋಹನ್‌ರಾವ್ ಕಬ್ಯಾಡಿ, ಪ್ರಫುಲ್ಲಚಂದ್ರರಾವ್ ಉಡುಪಿ, ಕೃಷ್ಣಕುಮಾರ್‌ರಾವ್ ಮಟ್ಟು , ಚಿಟ್ಪಾಡಿ ಭುಜಂಗರಾವ್, ಕೋಲ್ಪೆ ಗೋಪಾಲಕೃಷ್ಣರಾವ್, ಯು.ಅರವಿಂದ ಕುಮಾರ್ ಮಣಿಪಾಲ, ಕಿಶೋರ್ ಭಾಸ್ಕರ್ ರಾವ್ ಮುಂಬಯಿ, ವೈ.ವಿಠಲರಾವ್ ಚಿಟ್ಪಾಡಿ, ಶ್ರೀ ಪ್ರವೀಣ್ ಕುಮಾರ್ ಬೆಳ್ಳೆ, ಡಾ| ಲೋಕೇಶ್‌ರಾವ್ ಬಿ.ಕೆ., ಶ್ರೀ ಕುಂಜಾರು ನಿರಂಜನ ರಾವ್, ಡಾ| ಸತ್ಯನಾರಾಯಣ ಶಿವಮೊಗ್ಗ, ಶ್ರೀ ಎಲ್ಲೂರು ಉಮೇಶ ರಾವ್, ಶ್ರೀ ಕೆ.ಅನಂತರಾಮ ಶಾಸ್ತ್ರಿ ಪಡುಬಿದ್ರಿ, ಶ್ರೀ ಬಿ. ಆನಂದ ರಾವ್ ಲಾತೂರು, ಶ್ರೀ ಬಿ. ಜಯರಾಮ ರಾವ್ ಉಡುಪಿ, ಶ್ರೀ ಮರೂರು ನಾರಾಯಣ ಹೆಬ್ಬಾರ್ ಉಡುಪಿ, ಶ್ರೀ ನಂದಳಿಕ ಕೃಷ್ಣರಾವ್ ದೊಡ್ಡಣಗುಡ್ಡೆ, ಶ್ರೀ ಅಶೋಕ್ ತಂತ್ರಾಡಿ ಬೆಂಗಳೂರು, ಶ್ರೀಮತಿ ದೀಪಾಲಿ ಅಶೋಕ್ ಬೆಂಗಳೂರು, ಶ್ರೀ ತಂತ್ರಾಡಿ ಶಿವರಾಮ ಶ್ಯಾನುಭಾಗ್, ಶ್ರೀಮತಿ ಟಿ.ಹರಿಣಿ, ಶ್ರೀ ಪಿ.ಬಾಲಕೃಷ್ಣರಾವ್ ಬೆಂಗಳೂರು.


ಶ್ರೀಮತಿ ಮತ್ತು ಶ್ರೀ ಉದಯಚಂದ್ರ ರಾವ್ ನಂದಳಿಕೆ
ಯಶಸ್ವೀ ಎಂಟರ್‌ಪ್ರೈಸೆಸ್
ಶಾಂಭವಿ ಹೈಟ್ಸ್, ಸೈಂಟ್‌ಮೇರಿಸ್ ಕಾಲೇಜು ಎದುರು, ಮುಖ್ಯರಸ್ತೆ, ಶಿರ್ವ – 574 116.
ಇ-ಮೇಲ್ : udayarao42@gmail.com
Z Gift Item Z Stationary Z Xerox Z Lamination
Z Spiral Binding Z Mobile & DTC Recharge Z Tours & Travels
Z Courier Service Z Sports Items & Toys Z Ice Creams




RAJESH POWER PRESS
PRINTERS & PUBLISHERS
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
QUALITY FIRST AND ALWAYS

ಬಳಸಿದ ಕಾರುಗಳ ಮಾರಾಟ ಮತ್ತು ಖರೀದಿಗಾಗಿ ನಮ್ಮನ್ನು ಸಂಪರ್ಕಿಸಿ :
ಸೂಕ್ತ ಬೆಲೆಯೊಂದಿಗೆ ಉತ್ತಮ ಸೇವೆ ಲಭ್ಯ.





N. Laxmi Prasad
ಕಾರ್ಯಕಾರಿಣಿ ಮಂಡಳಿ ಸದಸ್ಯರು
D. K. District Used Vehicle Dealers & Agents Association (R.), Mangalore
Flat No. 103, Deepa Residency, Near Preethi Apartment
Kodiyalguttu West, Kodiyalbail, MANGALORE - 575 003
Mob. : 9845644489, 9964236997 E-mail : laxmiprasad5010@gmail.com

*With Best Complimemts From*
SRI M. SHAILESH RAO Ph : 9448624324
B.E., Civil
Civil Engineer & Contractor
SRI MALAVIKA ASSOCIATES
KALSANKA-UDUPI ROAD, UDUPI.
Website : shreemaalavikaassociates.com

## ಜಾಗತಿಕ ಮಟ್ಟದ ಸಮ್ಮೇಳನಕ್ಕೆ ಸಿದ್ಧತೆ



ಜಾಗತಿಕ ಮಟ್ಟದ ಸ್ಥಾನಿಕ ಬ್ರಾಹ್ಮಣರ ಒಕ್ಕೂಟವಾದ ಶ್ರೀ ಸ್ಥಾನಿಕ ಬ್ರಾಹ್ಮಣ ಮಹಾಮಂಡಲದ ವತಿಯಿಂದ ಬೆಂಗಳೂರಿನಲ್ಲಿ ಜಾಗತಿಕ ಮಟ್ಟದ ಸ್ಥಾನಿಕ ಬ್ರಾಹ್ಮಣರ ಸಮಾವೇಶವನ್ನು ಜರಗಿಸಲು ಪೂರ್ವಭಾವಿ ಸಭೆಯು ಪಡುಬಿದ್ರಿ ಬಾಲಗಣಪತಿ ದೇವಸ್ಥಾನದಲ್ಲಿ ತಾ.02.06.2019ರಂದು ಮಹಾಮಂಡಲದ ಅಧ್ಯಕ್ಷರಾದ ಶ್ರೀ ಜಗನ್ನಿವಾಸರಾಯರ ನೇತೃತ್ವದಲ್ಲಿ ನೆರವೇರಿತು.

## ಕನ್ನಡ ಸಮ್ಮೇಳನದಲ್ಲಿ ಗದ್ಯವಾಚನ



ಭಾರತೀಯ ವೈದ್ಯಕೀಯ ಸಂಘದ ಕರ್ನಾಟಕ ಘಟಕದ ವತಿಯಿಂದ ಕನ್ನಡ ವೈದ್ಯ ಬರಹಗಾರರ ಸಮ್ಮೇಳನವು ತಾ.26-05-2019ರಂದು ಮಂಗಳೂರಿನಲ್ಲಿ ಜರಗಿತು. ಈ ಸಮ್ಮೇಳನದಲ್ಲಿ ಡಾ। ವೈ.ಸುದರ್ಶನ ರಾವ್‌ರವರ ಹಾಸ್ಯ ಲೇಖನಗಳ ಸಂಕಲನ "ಮೆಡಿ-ಹಾಸ್ಯ"ದ ಲೇಖನವೊಂದು ಉತ್ತಮ ಬರಹವೆಂದು ಗುರುತಿಸಲ್ಪಟ್ಟು ಆ ಲೇಖನವನ್ನು ಈ ಸಮ್ಮೇಳನದಲ್ಲಿ ಡಾ। ವೈ.ಸುದರ್ಶನ ರಾವ್‌ರವರು ವಾಚಿಸಿದರು.

## ಪಾದೆಬೆಟ್ಟಿನಲ್ಲಿ ಭಜನಾ ಕಾರ್ಯಕ್ರಮ



ಶ್ರೀ ನರಸಿಂಹ ಜಯಂತಿಯಂದು ಪಾದೆಬೆಟ್ಟಿನಲ್ಲಿ ಶ್ರೀಶಾರದಾ ಭಜನಾ ಮಂಡಳಿಯಿಂದ ಭಜನಾ ಕಾರ್ಯಕ್ರಮ ನೆರವೇರಿತು.

## ನಾಲೂರಿನಲ್ಲಿ ಸಂಗೀತ ಕಾರ್ಯಕ್ರಮ




ನಾಲೂರು ಶಂಕರನಾರಾಯಣ ದೇವಸ್ಥಾನದ ಪುನರ್‌ಪ್ರತಿಷ್ಠೆ, ಬ್ರಹ್ಮಕಲಶೋತ್ಸವದಂದು ಡಾ। ವಿದ್ಯಾ ಎಸ್.ರಾವ್‌ರವರ ಸಂಗೀತ ಕಾರ್ಯಕ್ರಮ ಹಾಗೂ ಶ್ರೀಶಾರದಾ ಮಂಡಳಿಯಿಂದ ಭಜನಾ ಕಾರ್ಯಕ್ರಮವು ನೆರವೇರಿತು. ಹಾರ್ಮೋನಿಯಂನಲ್ಲಿ ಡಾ। ವೈ.ರವೀಂದ್ರನಾಥ ರಾವ್ ಹಾಗೂ ತಬಲಾದಲ್ಲಿ ಪೊಳಲಿ ಹರಿಕೃಷ್ಣ ಭಾಗವಹಿಸಿದ್ದರು.

## ಕಡುಬೇಸಗೆಯಲ್ಲಿ ನೀರು ಪೂರೈಕೆ; ಜಲಮೂಲಗಳ ಸಂರಕ್ಷಣೆ



ಉಡುಪಿಯ ಒಳಕಾಡುವಾರ್ಡಿನ ನಗರಸಭಾ ಸದಸ್ಯೆ ಶ್ರೀಮತಿ ರಜನಿಹೆಬ್ಬಾರ್ ಹಾಗೂ ಅವರ ಪತಿ ಶ್ರೀ ಮಂಜುನಾಥ ಹೆಬ್ಬಾರ್ (ನಮ್ಮ ಸಂಘದ ಅಧ್ಯಕ್ಷರು) ರವರು ಉಡುಪಿ ನಗರದಲ್ಲಿ ತೀವ್ರವಾಗಿರುವ ನೀರಿನ ಅಭಾವದ ಸಮಸ್ಯೆಗೆ ಶೀಘ್ರವಾಗಿ ಸ್ಪಂದಿಸಿ ತನ್ನ ಸ್ವಂತ ಖರ್ಚಿನಲ್ಲಿ ಹಾಗೂ ನಗರ ಸಭೆಯ ಸಂಪನ್ಮೂಲಗಳನ್ನು ಹೊಂದಿಸಿ ಟ್ಯಾಂಕರ್ ಮೂಲಕ ಸತತವಾಗಿ ವಾರ್ಡಿನ ನಾಗರಿಕರಿಗೆ ನೀರು ಪೂರೈಸಿ ಇತರ ಸದಸ್ಯರಿಗೆ ಮಾದರಿಯಾದರು. ಅಷ್ಟು ಮಾತ್ರವಲ್ಲದೇ ಪ್ರಧಾನ ಮಂತ್ರಿ ಮೋದಿಯವರ ಪ್ರಮಾಣವಚನ ಸಂದರ್ಭದಲ್ಲಿ ಪಟಾಕಿ ಸಿಡಿತ ಮೆರವಣಿಗೆಗಳ ಬದಲು ತನ್ನ ವಾರ್ಡ್‌ನಲ್ಲಿ ಪಾಳು ಬಿದ್ದಿದ್ದ ಎರಡು ಬಾವಿಗಳನ್ನು ದುರಸ್ತಿಗೊಳಿಸಿ ಇತರರಿಗೂ ಮೇಲ್ಪಂಕ್ತಿಯಾಗಿದ್ದಾರೆ. ಶ್ರೀ ಹೆಬ್ಬಾರ್ ದಂಪತಿಗಳ ಸಮಾಜಸೇವಾ ಕಾರ್ಯಗಳು ಇದೇ ರೀತಿ ಮುಂದುವರಿಯಲಿ ಎಂದು ಅಭಿನಂದಿಸುತ್ತೇವೆ

## ಅತ್ಯುತ್ತಮ ಚಿತ್ರಕಲಾ ಪ್ರಶಸ್ತಿ



ನಮ್ಮ ಸಂಘದ ಕೋಶಾಧಿಕಾರಿ ಶ್ರೀ ಬಿ.ಜಯರಾಮ ರಾವ್‌ರವರ ಸೊಸೆ ಅಪೂರ್ವ ಜೆ.ರಾವ್‌ರವರು ರಚಿಸಿದ ಈ ಚಿತ್ರಕಲೆಗೆ ಇನ್‌ಸ್ಟಾಗ್ರಾಮ್‌ನಲ್ಲಿ ಅತ್ಯುತ್ತಮ ಚಿತ್ರಕಲೆ ಪ್ರಶಸ್ತಿ ದೊರಕಿರುತ್ತದೆ. ಅಭಿನಂದನೆಗಳು.


ಶುಭಾಶಯಗಳೊಂದಿಗೆ
**ಹೆಬ್ಬಾರ್ ಎಂಟರ್‌ಪ್ರೈಸಸ್**
ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ-576101.
ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.
ಪ್ರೊ : ಮಂಜುನಾಥ ಹೆಬ್ಬಾರ್ ಸಂಪರ್ಕ ಸಂಖ್ಯೆ 9611099894




ಎಮ್. ದೇವಾನಂದ್ ಭಟ್
Cell : 9845644556
9483913344

**ಶೋಭಾ ಡಿಜಿಟಲ್**
ಸ್ಟುಡಿಯೋ & ವೀಡಿಯೊ
ಬೆಳ್ವಾಯಿ-574213 (08258)-276177 (O)
ಮೂಡಬಿದ್ರಿ ಲಾವಂತ ಕಾಂಪ್ಲೆಕ್ಸ್ 9901995655
ಎಡಪದವು - 574 164 (0824)-2256374 (O) ಮಂಗಳೂರು, ದ.ಕ.
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು



SAMPATH KUMAR Mobile : 9741508881
**TRISHULINI TOURIST**
*The Tourist People*
Near Mahishamardhini Temple, Bailur, Udupi.
ALL TYPES OF VEHICLES AVAILABLE FOR HIRE

# ಕಾರ್ಕಳದಲ್ಲಿ ಶ್ರೀ ಶಂಕರ ಜಯಂತಿ

ಕಾರ್ಕಳ ಶ್ರೀಶಂಕರ ಪ್ರತಿಷ್ಠಾನದ ವತಿಯಿಂದ ತಾ.09–05–2019ರಂದು ಶ್ರೀ ಶಂಕರ ಜಯಂತಿಯನ್ನು ಶ್ರೀ ಮನೋಹರ್ ರಾವ್‌ರವರ ವಾಸುಕಿ ನಿಲಯದಲ್ಲಿ ಆಚರಿಸಲಾಯಿತು.

ಕಟೀಲು ದುರ್ಗಾಪರಮೇಶ್ವರಿ ಸಂಸ್ಕೃತ ಮಹಾವಿದ್ಯಾಲಯದ ಪ್ರಾಚಾರ್ಯ ಶ್ರೀ ಪದ್ಮನಾಭ ಅನಂತಶಯನ ಇವರು ಮುಖ್ಯ ಅತಿಥಿಯಾಗಿ ಆಗಮಿಸಿದ್ದರು. ಅವರು ತನ್ನ ಪ್ರವಚನದಲ್ಲಿ “ಶಂಕರಾಚಾರ್ಯರು ಯಾರಿಗೂ ಬಲವಂತದಿಂದ ಅದ್ವೈತ ಸಿದ್ಧಾಂತವನ್ನು ಒಪ್ಪಿಕೊಳ್ಳಿ ಎಂದು ಉಪದೇಶಿಸಲಿಲ್ಲ. ಯಾರು ಸಂಪ್ರದಾಯ ಮತ್ತು ಸಂಸ್ಕಾರವನ್ನು ಕೇಳುಗರ ಮನಸ್ಸಿನಲ್ಲಿ ಜಾಗ್ರತಗೊಳಿಸುತ್ತಾರೋ ಅವರೇ ನಿಜವಾದ ಶ್ರೇಷ್ಠ ವ್ಯಕ್ತಿಗಳು” ಎಂದು ನುಡಿದರು. ಪ್ರತಿಷ್ಠಾನದ ಮಾಜಿ ಅಧ್ಯಕ್ಷ ಶ್ರೀ ಮನೋಹರ್ ರಾವ್ ಅಧ್ಯಕ್ಷತೆ ವಹಿಸಿದ್ದರು. ಶ್ರೀಮತಿ ಸಾವಿತ್ರಿ ಮನೋಹರ್ ಸರ್ವರನ್ನು ಸ್ವಾಗತಿಸಿ ಪ್ರವಚನಕಾರರನ್ನು ಸಭೆಗೆ ಪರಿಚಯಿಸಿದರು. ಆರಂಭದಲ್ಲಿ ಶ್ರೀ ಯಾಜಿ ನಿರಂಜನ್ ಭಟ್ ಪಾವಂಜೆಯವರು ಆಚಾರ್ಯರ ಪೂಜೆಯನ್ನು ಸಾಂಗವಾಗಿ ನೆರವೇರಿಸಿದರು. ಶ್ರೀ ಶಂಕರ ಪ್ರತಿಷ್ಠಾನದ ಮಹಿಳಾ ವಿಭಾಗದವರು ಭಜಗೋವಿಂದ ಮತ್ತು ಭಜನೆಯನ್ನು ಹಾಡಿದರು. ಖಜಾಂಜಿ ಶ್ರೀ ಹರೀಶ್ ಚಂದ್ರ ಕರ್ವಾಲುರವರು ಸಂಘದ ವತಿಯಿಂದ ಪ್ರವಚನಕಾರರನ್ನು ಗೌರವಿಸಿದರು. ಶೃಂಗೇರಿಯ ಮಠದ ವತಿಯಿಂದ ಶ್ರೀ ಶಂಕರ ಸೇವಾ ಸಮಿತಿಯ ಅಧ್ಯಕ್ಷ ಶ್ರೀ ಮುರಳೀಧರ ಶರ್ಮ ಹಾಗೂ ಪ್ರತಿಷ್ಠಾನದ ಸದಸ್ಯರು ಪ್ರವಚನಕಾರರನ್ನು ಸನ್ಮಾನಿಸಿದರು.

ಪ್ರತಿಷ್ಠಾನದ ಕಾರ್ಯದರ್ಶಿ ಶ್ರೀ ಅನಿಲ್ ಕುಮಾರ್ ಕೆಮ್ಮಣ್ಣು ಧನ್ಯವಾದ ಸಲ್ಲಿಸಿದರು. ಜೊತೆ ಕಾರ್ಯದರ್ಶಿ ಶ್ರೀ ಶಿವರಾಮ್ ನಕ್ರೆ ಕಾರ್ಯಕ್ರಮ ನಿರ್ವಹಿಸಿದರು. ನಂತರ ನೆರೆದ ಭಕ್ತರಿಗೆ ಪ್ರತಿಷ್ಠಾನದ ಪರವಾಗಿ ಮನೋಹರರಾವ್ ದಂಪತಿಗಳು ಉಪಹಾರದ ವ್ಯವಸ್ಥೆ ಮಾಡಿದರು.

# ನಾಲೂರಿಗೆ ಪ್ರವಾಸ





ಇದೇ ಕಳೆದ ತಾ.11.05.2019ನೇ ಶನಿವಾರದಂದು ನಮ್ಮ ಸಂಘದ ಸದಸ್ಯರು (ಸುಮಾರು 40) ಅಧ್ಯಕ್ಷರಾದ ಶ್ರೀ ಕೆ. ಮಾಧವ ರಾವ್ ಇವರ ನೇತೃತ್ವದಲ್ಲಿ ಪುತ್ತೂರು ಸಮೀಪದ ಕಡಬ ತಾಲೂಕಿನ ನಾಲೂರು ಎಂಬಲ್ಲಿ ನಮ್ಮ ಸಮಾಜದ ಕುಂಭಾಟ್ ವಂಶಸ್ಥರ ಮನೆತನದ ಶ್ರೀ ಶಂಕರನಾರಾಯಣ ಗಣಪತಿ ದೇವಸ್ಥಾನದ ಜೀರ್ಣೋದ್ಧಾರ ಕಾರ್ಯವು ನಡೆಯುತ್ತಿದ್ದು, ಅಲ್ಲಿಗೆ ಮಧ್ಯಾಹ್ನ ಸುರತ್ಕಲ್‌ನಿಂದ ಗಂಟೆ 3.00ಕ್ಕೆ ಸರಿಯಾಗಿ ಹೊರಟು ಸಂಜೆ 6.00 ಗಂಟೆಗೆ ತಲುಪಿದೆವು. ಸಂಘದ ವತಿಯಿಂದ ಅಧ್ಯಕ್ಷರು ದೇಣಿಗೆಯನ್ನು ನೀಡಿದರು. ಅಲ್ಲಿಯ ಸಮಾಜ ಬಾಂಧವರು ನಮ್ಮನ್ನು ಆತ್ಮೀಯತೆಯಿಂದ ಬರಮಾಡಿಕೊಂಡು ನಂತರ ಉಪಹಾರವನ್ನು ಸೇವಿಸಿ ಪೂಜೆಯ ಬಳಿಕ ಪ್ರಸಾದವನ್ನು ಪಡೆಯುವಂತೆ ತಿಳಿಸಿದರು. ಉಪಹಾರದ ಬಳಿಕ ಮರುದಿನದ ಪೂಜೆಗೆ ಬೇಕಾಗುವ ಅಥವಾ ಏನಾದರೂ ಸೇವೆ ಮಾಡಲಿದ್ದರೆ ಎಂದು ನಾವು ವಿನಂತಿಸಿದಾಗ ಅವರು 1108 ಮೊದಕವನ್ನು ಮಾಡಿಕೊಡುವಂತೆ ತಿಳಿಸಿದರು. ಇದು ನಮ್ಮ ಸುಯೋಗವೆಂದು ಭಾವಿಸಿ ನಮ್ಮ ಸಂಘದ ಎಲ್ಲಾ ಸದಸ್ಯರು ಮೋದಕ ತಯಾರಿಕೆಯ ಕಾರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರು. ಮೋದಕ ತಯಾರಿಕೆಯ ಬಳಿಕ ಪೂಜೆಯಾಗಿ ಪ್ರಾರ್ಥನೆ ಮಾಡಿ ನಂತರ ಪ್ರಸಾದವನ್ನು ವಿತರಿಸಿದರು.

ಆಮೇಲೆ ಭೋಜನವನ್ನು ಸ್ವೀಕರಿಸಿ, ಅಲ್ಲಿಂದ ರಾತ್ರಿ ಸುಮಾರು 11.30ಗೆ ಸರಿಯಾಗಿ ಎಲ್ಲರೂ ಸುರತ್ಕಲ್‌ಗೆ ತಲುಪಿದೆವು. ಪ್ರಯಾಣವು ಯಾವುದೇ ವಿಘ್ನವಿಲ್ಲದೇ ನಡೆದಿರುವುದು ನಮ್ಮೆಲ್ಲರಿಗೂ ಸಂತಸವನ್ನುಂಟುಮಾಡಿದೆ. ಈ ಸಂದರ್ಭದಲ್ಲಿ ಸಂಘದ ಉಪಾಧ್ಯಕ್ಷರುಗಳಾದ ಶ್ರೀ ಎಮ್.ವಾಸುದೇವ ಶಾನುಭೋಗ್, ಶ್ರೀ ಗೋಪಾಲಕೃಷ್ಣ, ಕಾರ್ಯದರ್ಶಿಯವರಾದ ಶ್ರೀ ಪಾಲಚಂದ್ರಶರ್ಮ, ಶ್ರೀ ಪ್ರವೀಣ್ ಕುಮಾರ್, ಕೋಶಾಧಿಕಾರಿಗಳಾದ ಶ್ರೀ ರಾಘವೇಂದ್ರ ರಾವ್, ಮಹಿಳಾ ವೇದಿಕೆಯ ಸದಸ್ಯರು, ಯುವ ವೇದಿಕೆಯ ಸದಸ್ಯರು ಉಪಸ್ಥಿತರಿದ್ದರು.

–ಅಧ್ಯಕ್ಷರು ಸ್ಥಾನಿಕ ಬ್ರಾಹ್ಮಣ ಸಂಘ ಸುರತ್ಕಲ್

**Buying and selling shares as easy as checking your emails**

**Sharekhan Online Trading Account Features:**

- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com

Sharekhan
YOUR GUIDE TO THE FINANCIAL JUNGLE

Visit : www.sharekhan.com

Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142): for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do 's & Don'ts by NCDEX. (Subbroker Regn.Nos: BSE: INS010606122;NSE: INS23106924)



# ಮೂಡಬಿದ್ರೆಯಲ್ಲಿ ಶ್ರೀ ಶಂಕರ ಜಯಂತಿ

ತಾ.09.05.2019ರಂದು ಶ್ರೀ ಶಂಕರ ಜಯಂತಿಯನ್ನು ಮೂಡಬಿದ್ರೆಯ ಶ್ರೀ ಆದಿಶಂಕರ ಬ್ರಾಹ್ಮಣ ಪರಿಷತ್‌ನ ವತಿಯಿಂದ ಶ್ರೀ ಚಂದ್ರಶೇಖರ ದೇವಸ್ಥಾನದಲ್ಲಿ ಆಚರಿಸಲಾಯಿತು. ಶ್ರೀ ಶಂಕರ ಅಷ್ಟೋತ್ತರ ಶತನಾಮಾವಳಿ ಪಾರಾಯಣ, ಭಜನೆ ಹಾಗೂ ಮಹಾಪೂಜೆಗಳೊಂದಿಗೆ ಕಾರ್ಯಕ್ರಮವು ಸಂಪನ್ನಗೊಂಡಿತು.

# ಶ್ರೀ ಶಂಕರ ಜಯಂತಿ ಆಚರಣೆ



ಕುಂದಾಪುರ ತಾಲೂಕು ಸ್ಥಾನಿಕ ಬ್ರಾಹ್ಮಣ ಸಂಘ (ರಿ) ಹೊಸ್ಕೋಟೆ, ಅಂಚೆ ಕೆರ್ಗಾಲು ಇವರ ವತಿಯಿಂದ “ಶ್ರೀ ಶಂಕರ ಜಯಂತಿ” ಆಚರಣೆಯನ್ನು ಶ್ರೀ ಆನಂದ ರಾವ್, ಹೊಸ್ಕೋಟೆ ಇವರ ಮನೆಯಲ್ಲಿ ಆಚರಿಸಿದ್ದು, ಸಂಘದ ಅಧ್ಯಕ್ಷರಾದ ಶ್ರೀ.ಜೆ. ಕೃಷ್ಣಗೋಪಾಲ ಹೆಬ್ಬಾರ ಇವರು ಅಧ್ಯಕ್ಷತೆ ವಹಿಸಿದರು. ಶ್ರೀ. ಎಚ್. ಜಗದೀಶ ರಾವ್ ಇವರು ಸ್ವಾಗತಿಸಿದರು. ಮುಖ್ಯ ಅತಿಥಿಯಾಗಿ ವಿಶ್ರಾಂತ ಉಪನ್ಯಾಸಕ ಶ್ರೀ ಪಿ. ಶೇಷಪ್ಪಯ್ಯ ಬೈಂದೂರು ಇವರು ವಹಿಸಿದ್ದರು. ಶ್ರೀ ಶಂಕರಾಚಾರ್ಯರ ಜೀವನ ಹಾಗೂ ಸಾಧನೆಗಳ ಕುರಿತು ಮಾತನಾಡುತ್ತಾ 7 ಮತ್ತು 8 ನೇ ಶತಮಾನಗಳಲ್ಲಿ ಸಮಾಜದಲ್ಲಿ ಬೆಳೆದು ಬಂದ ಧರ್ಮ ವಿರೋಧಿ ಆಚರಣೆಗಳು, ಮೂಢನಂಬಿಕೆಗಳಿಂದ ವೈದಿಕ ಧರ್ಮವನ್ನು ರಕ್ಷಿಸಿ ಉದ್ಧರಿಸಲು ಶ್ರೀ ಶಂಕರರು ನಡೆಸಿದ ಸಾಹಸಮಯ ಸಾಧನೆಗಳನ್ನು ಮನಮುಟ್ಟುವಂತೆ ವಿವರಿಸಿದರು. ಧರ್ಮದ ಉಳಿವಿಗಾಗಿ ಚತುರಾಮ್ನಾಯ ಮಠಗಳನ್ನು ಸ್ಥಾಪಿಸುವುದರ ಮೂಲಕ ಹೊಸಮಾರ್ಗವನ್ನು ತೋರಿಸಿದ ಶ್ರೀ ಶಂಕರರ ದೂರದರ್ಶಿತ್ವದ ನಡೆಯ ವಿಶೇಷತೆಯನ್ನು ವಿವರಿಸಿದರು. ಆಧುನಿಕ ಭಾರತದಲ್ಲಿ ಅದ್ವೈತ ತತ್ವವನ್ನು ದೇಶ ವಿದೇಶಗಳಲ್ಲಿ ಪ್ರಚಾರಪಡಿಸುತ್ತಾ ನೊಂದವರ ಸೇವೆ ಮತ್ತು ಜ್ಞಾನ ಪ್ರಸಾರಗಳನ್ನು ನಡೆಸುತ್ತಿರುವ ರಾಮಕೃಷ್ಣಮಠದ ವಿಷಯವನ್ನು ಕೃತಜ್ಞತೆಯೊಂದಿಗೆ ನೆನಪಿಸಿಕೊಂಡರು. ಸಂಘದ ಸ್ಥಾಪಕ ಅಧ್ಯಕ್ಷರಾದ ಶ್ರೀ ಎಚ್. ಹಿರಿಯಣ್ಣ ರಾವ್ ಉಪಸ್ಥಿತರಿದ್ದರು. ಶ್ರೀ ಎಚ್.ಲಕ್ಷ್ಮೀನಾರಾಯಣ ರಾವ್ ಇವರು ಧನ್ಯವಾದ ಸಲ್ಲಿಸಿದರು.

## ಶ್ರೀ ಶಾರದಾ ದೇವಸ್ಥಾನ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ

**ಈ ತಿಂಗಳ ಕಾರ್ಯಕ್ರಮಗಳು**

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30ಕ್ಕೆ

ಪ್ರತಿ ಮಂಗಳವಾರ : **ಸೌಂದರ್ಯಲಹರಿ ಪಾರಾಯಣ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ ‘‘**ಪಾರಾಯಣ**’’ ಸಂಜೆ ಗಂಟೆ 4-30ರಿಂದ

**ತಾ.20-06-2019 ಮತ್ತು ತಾ.20-07-2019 ಸಂಕಷ್ಟಹರ ಚತುರ್ಥಿಯಂದು ‘‘ಸಾಮೂಹಿಕ ಗಣಹೋಮ’’ ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.17-06-2019 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ತಾ.22-06-2019 ಮತ್ತು ತಾ.07-07-2019 ಪಂಚಮಿಯಂದು ‘‘ನಾಗದೇವರಿಗೆ ತನುಸೇವೆ’’ ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

## ಮಿಥುನ ಮಾಸದ ವಿಶೇಷ ದಿನಗಳು

| | |
|---|---|
| 15–06–2019 | ಮಿಥುನ ಸಂಕ್ರಮಣ |
| 17–06–2019 | ಹುಣ್ಣಿಮೆ |
| 18–06–2019 | ಗ್ರೀಷ್ಮಋತು ಜೇಷ್ಠ ಮಾಸದ ಕೃಷ್ಣಪಕ್ಷಾರಂಭ |
| 20–06–2019 | ಸಂಕಷ್ಟಹರ ಚತುರ್ಥಿ ಚಂದ್ರೋದಯ ಗಂಟೆ 9–34ಕ್ಕೆ |
| 21–06–2019 | ದಕ್ಷಿಣಾಯನ ಆರಂಭ |
| 28–06–2019 | ಸ್ಮಾರ್ತೈಕಾದಶಿ |
| 02–07–2019 | ಅಮಾವಾಸ್ಯೆ |
| 03–07–2019 | ಗ್ರೀಷ್ಮಋತು ಆಷಾಢ ಮಾಸದ ಶುಕ್ಲಪಕ್ಷಾರಂಭ |
| 12–07–2019 | ಸರ್ವೈಕಾದಶಿ ತಪ್ತಮುದ್ರಾಧಾರಣಂ ಚಾತುರ್ಮಾಸ ಆರಂಭ |
| 16–07–2019 | ಗುರು ಪೂರ್ಣಿಮಾ ಕರ್ಕಾಟಕ ಸಂಕ್ರಮಣ ಖಂಡಗ್ರಾಸ ಚಂದ್ರಗ್ರಹಣ ಯತಿಗಳ ಚಾತುರ್ಮಾಸ ಆರಂಭ |
| 17–07–2019 | ಗ್ರೀಷ್ಮಋತು ಆಷಾಢ ಮಾಸದ ಕೃಷ್ಣಪಕ್ಷಾರಂಭ ಆಟಿ ತಿಂಗಳು ಆರಂಭ |
| 20–07–2019 | ಸಂಕಷ್ಟಹರ ಚತುರ್ಥಿ ಚಂದ್ರೋದಯ ಗಂಟೆ 9–37ಕ್ಕೆ |

# ನಮ್ಮ ಸಿಂಗಾಪುರ ಮೆಲ್ಬೋರ್ನ್ ಕೌಂಟುಂಬಿಕ ಪ್ರವಾಸ

– ರಾಮಚಂದ್ರ ಕೊಠಾರಿ
ಮಂಜುನಾಥ ನಗರ, 1ನೇ ಕ್ರಾಸ್
ಪರ್ಕಳ, ಉಡುಪಿ ಜಿಲ್ಲೆ
ಮೊ : 9663558266

ನಮ್ಮ ಕುಟುಂಬ ಮಿಲನ ಪ್ರವಾಸವನ್ನು ನಾವಿಬ್ಬರು ಜನವರಿ 19, 2019 ರಂದು ಪ್ರಾರಂಭಿಸಿ ಸುಮಾರು 100 ದಿನಗಳ ನಂತರ ಏಪ್ರಿಲ್ 25 ರಂದು ನಮ್ಮ ಮನೆ ಪರ್ಕಳಕ್ಕೆ ವಾಪಾಸ್ಸಾದೆವು.

ಮೊದಲಿಗೆ ನಾವು ಬೆಂಗಳೂರಿನಿಂದ ಸಿಂಗಾಪುರಕ್ಕೆ ತಾರೀಕು 21.01.2019 ರಂದು ಬೆಳಗ್ಗೆ 11 ಘಂಟೆಗೆ ಹೊರಟು ಸಂಜೆ 7 ಕ್ಕೆ ಸಿಂಗಾಪುರ ತಲುಪಿದೆವು. ಸಿಂಗಾಪುರದಲ್ಲಿ ನನ್ನ 2ನೇ ಮಗ ಸುದೀಪನ ಗೃಹ ಪ್ರವೇಶವನ್ನು ನಾವು ಜನವರಿ 23 ರಂದು ನೆರವೇರಿಸಿ ನಂತರ ಅಲ್ಲಿಯೇ ಇರತೊಡಗಿದೆವು.

ಇದು ನಮ್ಮ ಸಿಂಗಾಪುರ 4 ನೇ ಪ್ರವಾಸವಾಗಿದೆ. ಇಲ್ಲಿ ಹೋದವರು ನೋಡಲೇ ಬೇಕಾದ ಪ್ರವಾಸಿ ತಾಣಗಳೆಂದರೆ ಮರಿನಾ ಬೇ, ಮರ್ಲಿಯನ್, ಸಂತೋಸ, ಸಯನ್ಸ್ ಸೆಂಟರ್, ಸ್ನೋಸಿಟಿ, ಮುಸ್ತಾಫಾ ಸೆಂಟರ್ ಮತ್ತು ಜನನಿಬಿಡ ಆರ್ಚರ್ ರಸ್ತೆಯ ಸೊಬಗು, ಮರಿನಾ ಬೇ ಯಲ್ಲಿ ನಾವು 68 ಮಹಡಿಯ ಕಟ್ಟಡವನ್ನು ಲಿಫ್ಟ್ ಮೂಲಕ ಹತ್ತಿ ಅದರ ಮೇಲೆ ದೋಣಿಯಾಕಾರದ ಕಟ್ಟಡ ನೋಡಿ ಬೆರಗಾದೆವು. ಇದರ ಮೇಲೆ ಹೋಟೆಲ್, ಈಜುಕೊಳ, ಅಂಗಡಿಗಳಿದ್ದು, ಇಡೀ ಸಿಂಗಾಪುರದ ಸೌಂದರ್ಯವನ್ನು ಕಂಡೆವು, ಇನ್ನೂ ಸಂತೋಸದಲ್ಲಿ ಕೇಬಲ್ ಕಾರ್, ಮರ್ಲಿಯನ್ ಮೂರ್ತಿ, ವಿಂಗ್ಸ್ ಆಫ್ ಟೈಡ್ ಎಂಬ ಆಕರ್ಷಕ ಪ್ರದರ್ಶನವನ್ನು ನೋಡಿ ಆನಂದಿಸಿದೆವು. ಮರ್ಲಿಯನ್ ಎಂಬುವುದು ಸಿಂಗಾಪುರದ ರಾಷ್ಟ್ರ ಲಾಂಛನವಾಗಿದೆ. Mermaid (ಮತ್ಸ್ಯಕನ್ಯೆ) lion (ಸಿಂಹ ಮುಖದ) ಇವೆರಡೂ ಸೇರಿ Merlion ಆಗಿದೆ. ಇಲ್ಲಿ ನಾವು ಅತೀ ಸುಂದರವಾದ ಮೃಗಾಲಯ, ಬೊಟಾನಿಕಲ್ ಗಾರ್ಡನ್, ಇತ್ಯಾದಿಗಳನ್ನು ನೋಡಿದೆವು.

ಸಿಂಗಾಪುರ ನೋಡಿದ ಪ್ರತಿಯೊಬ್ಬರೂ ಹೇಳುವುದೇನೆಂದರೆ ಇಲ್ಲಿಯ ರಸ್ತೆಗಳ, ಸ್ವಚ್ಛತೆ, ಮತ್ತು ಸಮಯ ಪರಿಪಾಲನೆಯ ಬಸ್ಸುಗಳು, ಮೆಟ್ರೋ ರೈಲು ಸೇವೆಗಳು. ಇಲ್ಲಿಯ ರಸ್ತೆಗಳ ಮೇಲೆ ಉಗುಳುವು ದಾಗಲೀ, ಗಲೀಜು ಮಾಡುವಂತಿಲ್ಲ. ನಮ್ಮ ರಾಜ್ಯದ ಮಂತ್ರಿಗಳು ನಮ್ಮ ಬೆಂಗಳೂರನ್ನು ಸಿಂಗಾಪುರದಂತೆ ಮಾಡುತ್ತೇವೆಂದು ಹೇಳುತ್ತಿರುತ್ತಾರೆ. ಇಲ್ಲಿ ರಸ್ತೆ ಎರಡೂ ಬದಿಗಳಲ್ಲಿ 11 ರಿಂದ 15 ಮಹಡಿಯ ಪ್ಲಾಟ್‌ಗಳನ್ನು ನೋಡಬಹುದು. ಇಲ್ಲಿ ಪ್ರತ್ಯೇಕವಾದ ಮನೆಗಳು ಬಹಳ ಕಡಿಮೆ ಇದೆ.

ಇಲ್ಲಿ ನಾವು ಈ ಬಾರಿ ಹೆಚ್ಚಿನ ಹಿಂದೂ ದೇವಾಲಯಗಳನ್ನು ನೋಡಿದೆವು. ಇಲ್ಲಿ ಹೆಚ್ಚಾಗಿ ದೇವಾಲಯಗಳಲ್ಲಿ ತಮಿಳು ಮಾತನಾಡುವ ಜನರಿದ್ದಾರೆ. ಉಳಿದಂತೆ ಈ ಊರಿನಲ್ಲಿ ಚೈನೀಸ್ ಜನರೇ ಹೆಚ್ಚಾಗಿದ್ದಾರೆ. ನಾವು ನೋಡಿದ ದೇವಾಲಯಗಳಲ್ಲಿ ಮಹಾಮಾರಿಯಮ್ಮ ದೇವಸ್ಥಾನ, ಶಿವನ್ ಟೆಂಪಲ್, ಮಹಾಕಾಳಿಯಮ್ಮನ್ ದೇವಸ್ಥಾನಗಳು ಮುಖ್ಯವಾಗಿದೆ. ಇಲ್ಲಿ ಒಟ್ಟು 24 ದೇವಸ್ಥಾನಗಳು ಇವೆ ಎಂದು ಇಲ್ಲಿನ ಹಿಂದೂ ಮ್ಯಾಗಜಿನ್‌ನಲ್ಲಿ ಓದಿದ್ದೇನೆ. ಇಲ್ಲಿ ಚಾಂಗಿ ರೋಡ್‌ನಲ್ಲಿರುವ ಶ್ರೀ ರಾಮನ ದೇವಸ್ಥಾನದಲ್ಲಿ ಇರುವ ಹನುಮಂತನ 60 ಅಡಿ ಎತ್ತರದ ನಿಂತ ಭಂಗಿಯ ವಿಗ್ರಹವನ್ನು ನೋಡುವಾಗ ನನಗೆ ನಮ್ಮ ಮೂಡುಬಿದ್ರೆ ಸಮೀಪದ ಹೊಸನಾಡು ಕ್ಷೇತ್ರದ ಹನುಮಂತನ ವಿಗ್ರಹದ ನೆನಪಾಯಿತು. ನಾವು ಹೋದ ದಿನ ಇಲ್ಲಿ ಶ್ರೀ ರಾಘವೇಂದ್ರ ಸ್ವಾಮಿಗಳ 424 ನೇ ಜಯಂತಿಯನ್ನು ಆಚರಿಸಿದ್ದರು. ಇಲ್ಲಿ ಚಾಂಗಿ ವಿಮಾನ ನಿಲ್ದಾಣವು ಹತ್ತಿರ ಇರುವುದರಿಂದ ವಿಮಾನಗಳು ತೆಂಗಿನ ಮರದಷ್ಟೇ ಎತ್ತರದಲ್ಲಿ 5 ನಿಮಿಷಕ್ಕೊಂದರಂತೆ ಬರುತ್ತಿದ್ದವು.

ಇಲ್ಲಿಂದ ಮುಂದೆ ನಾವು ಇಸ್ತಾನದಲ್ಲಿರುವ ಸಿಂಗಾಪುರದ ಅಧ್ಯಕ್ಷರ ನಿವಾಸವನ್ನು ದೂರದಿಂದಲೇ ನೋಡಿದೆವು, ನಂತರ ಹತ್ತಿರದ ಸುಬ್ರಹ್ಮಣ್ಯ ದೇವಸ್ಥಾನ ನೋಡಿದೆವು.

ನಮ್ಮ ಪ್ರವಾಸದಲ್ಲಿ ನಮಗೆ ಎರಡು ವಿಶೇಷ ಕಾರ್ಯಕ್ರಮಗಳನ್ನು ನೋಡುವ ಅವಕಾಶ ದೊರಕಿತು. ಫೆಬ್ರವರಿ 23 ರಂದು ಇಲ್ಲಿ ಎರಡನೇ ವಿಶ್ವ ಒಕ್ಕಲಿಗರ ಸಮ್ಮೇಳನ ಬಹಳ ವಿಜೃಂಭಣೆಯಿಂದ ಬೆಳಿಗ್ಗೆ 9 ರಿಂದ ರಾತ್ರಿ 10 ರವರೆಗೆ ನಡೆಯಿತು. ಈ ಕಾರ್ಯಕ್ರಮದಲ್ಲಿ ಸಿನಿಮಾ ನಟರಾದ ಯಶ್, ಸುಮಲತಾ ಅಂಬರೀಶ್, ಕರ್ನಾಟಕ ಸರಕಾರದ ಮಂತ್ರಿಗಳು, ಶಾಸಕರು ಬಂದಿದ್ದರು. ಈ ಕಾರ್ಯಕ್ರಮದ ಮನೋರಂಜನೆಯ ಅಂಗವಾಗಿ ಕನ್ನಡ ಸಂಘ ಸಿಂಗಾಪುರವನ್ನು ಆಮಂತ್ರಿಸಿದ್ದರು. ಇದರಲ್ಲಿ ನನ್ನ ಮಗ ಪದಾಧಿಕಾರಿ ಯಾಗಿದ್ದರಿಂದ ನಮಗೆ ಪಾಸ್ ಮೂಲಕ ಪ್ರವೇಶವಿತ್ತು. ಇಲ್ಲಿ ನನ್ನ ಮಗ ಮೊಮ್ಮಗಳ ನೃತ್ಯ, ನಾಟಕಗಳು ಬಹಳ ಜನರಿಂದ ಪ್ರಶಂಸೆಗೆ ಒಳಗಾಗಿ, ಅವಳಿಗೆ ಮಾಲೆ ಹಾಕಿ ಸನ್ಮಾನಿಸಿದರು. ಇನ್ನೊಂದು ವಾರದಲ್ಲಿ ನಮ್ಮ ಊರಿನ ಸುಳ್ಯದ ಯುವತಿಯಿಂದ ಅರಂಗೇಟ್ರಮ್ ಕಾರ್ಯಕ್ರಮವಿತ್ತು. ಇಲ್ಲಿಗೆ ಖ್ಯಾತ ನಾಟ್ಯಗಾರ್ತಿ ಮೈಸೂರು ನಗರದ ವಸುಂಧರಾ ದೊರೆಸ್ವಾಮಿ ಬಂದು, ತಮ್ಮ ಪ್ರಾತ್ಯಕ್ಷಿಕೆಯನ್ನು ನೀಡಿ, ಹರಸಿದರು. ಇಲ್ಲಿಯ ನಮ್ಮ ಊರಿನಂತೆಯೇ ಹವಾಮಾನ ಇದೆ. ಯಾವಾಗ ಮಳೆ ಬರುತ್ತದೆ ಎಂದು ಹೇಳುವಂತಿಲ್ಲ.

ಅಂತೂ ಇಲ್ಲಿ ಎರಡು ತಿಂಗಳ ವಾಸ್ತವ್ಯದ ನಂತರ ನಾವು ತಾ. 16.03.2019 ರಂದು ಒಂದು ತಿಂಗಳ ಮಟ್ಟಿಗೆ ಆಸ್ಟ್ರೇಲಿಯಾ ದೇಶದ ವಿಕ್ಟೋರಿಯಾ ರಾಜ್ಯದ ರಾಜಧಾನಿ ಮೆಲ್ಬೋರ್ನ್ ನಗರವನ್ನು. ನಮ್ಮ ಮಗ ಶರತ್ ಚಂದ್ರ ಮನೆಗೆ ಅಚಾನಕ್ಕಾಗಿ ಹೋಗುವ ಸಂದರ್ಭ ಒದಗಿ ಬಂತು. ಮೆಲ್ಬೋರ್ನ್ ನಗರವನ್ನು ನಾವು ಪ್ರಥಮ ಬಾರಿಗೆ ನೋಡಿದೆವು. ಇಲ್ಲಿ ವಿಶಾಲವಾದ ರಸ್ತೆಗಳಿದ್ದು, ಬಹಳ ಸ್ವಚ್ಛತೆಯಿಂದ ಸುಂದರವಾಗಿದೆ. ಇಲ್ಲಿಯ ವಿಶೇಷವೇನೆಂದರೆ ರಸ್ತೆಯ ಮೇಲೆ ಓಡುವ ರೈಲುಗಳು. ಇದನ್ನು ಟ್ರಾಮ್ ಎಂದು ಕರೆಯುತ್ತಾರೆ. ಇದಕ್ಕೆ ಬೇರೆ ಸಿಗ್ನಲ್‌ಗಳಿಲ್ಲ, ಹಿಂದಿನಿಂದ, ಮುಂದಿನಿಂದ , ಜನರು, ವಾಹನಗಳು ಓಡಾಡುತ್ತಿರುತ್ತವೆ. ಈ ತರಹದ ಟ್ರಾಮ್‌ಗಳನ್ನು ನಮ್ಮ ದೇಶದ ಕೋಲ್ಕತ್ತಾ ನಗರದಲ್ಲಿ ಇದೆ ಎಂದು ಕೇಳಿದ್ದೇನೆ.

ಇಲ್ಲಿನ ಬೀಚ್‌ಗಳನ್ನು ನೋಡುವುದೇ ಚೆಂದ. ವಿಶಾಲವಾದ ಪ್ಲಾಟ್‌ಫಾರ್ಮ್ ಇರುವ ಬೀಚ್‌ಗಳು ಬಹಳಷ್ಟು ಇವೆ. ಇಲ್ಲಿ ಹವಾಮಾನ ಮಾತ್ರ ಬಹಳ ವಿಚಿತ್ರವಾಗಿದೆ. ಒಂದೇ ದಿನದಲ್ಲಿ ಸೆಕೆ, ಚಳಿ, ಮಳೆ ಇರುತ್ತದೆ. ಇಲ್ಲಿ ಮಳೆಗಾಲ ಎಂಬುದಿಲ್ಲ. ಯಾವಾಗಲೂ ಬರಬಹುದು. ಇಲ್ಲಿ ಹೆಚ್ಚಾಗಿ ಚಳಿಯೇ ಇರುತ್ತದೆ. ಏಪ್ರಿಲ್‌ನಿಂದ ಅಕ್ಟೋಬರ್‌ವರೆಗೆ ಚಳಿಗಾಲ. ನವಂಬರ್‌ನಿಂದ ಮಾರ್ಚ್ ವರೆಗೆ ಸೆಕೆಗಾಲ. ಇದು ಭೂ ಮಧ್ಯ ರೇಖೆಗಿಂತ ಕೆಳಗೆ ಇರುವ ಪ್ರದೇಶವಾದ್ದರಿಂದ ವಿಪರೀತ ಚಳಿಯೇ ಜಾಸ್ತಿ ಇರುತ್ತದೆ.

ಇಲ್ಲಿ ನಾವು ನೋಡಿದ ಕೆಲವು ಸ್ಥಳಗಳೆಂದರೆ ಅತೀ ದೊಡ್ಡ 150 ವರ್ಷ ಹಿಂದಿನ ವಿಕ್ಟೋರಿಯಾ ಮಾರ್ಕೆಟ್, ಇಸ್ಕಾನ್ ದೇವಾಲಯ, ತೆಂಡಿನ್ಯಾಂಗ್ ನಲ್ಲಿರುವ ಶಿವ ವಿಷ್ಣು ದೇವಸ್ಥಾನ ಮತ್ತು ಮುರ್ರಂಬಿನಾದಲ್ಲಿರುವ ವೆಂಕಟಕೃಷ್ಣ ಬೃಂದಾವನ ಸಹಿತ ಶ್ರೀ ರಾಘವೇಂದ್ರ ಸ್ವಾಮಿಗಳ ಮಠ ಬಹಳ ಆಕರ್ಷಣೀಯ ವಾಗಿದೆ. ಇದನ್ನು ನಮ್ಮ ಉಡುಪಿ ಪುತ್ತಿಗೆ ಮಠಾಧೀಶರು 5 ವರ್ಷದ ಹಿಂದೆ ಸ್ಥಾಪಿಸಿದ್ದರು. ಇಲ್ಲಿ ಎಲ್ಲವೂ ಕನ್ನಡ ವಾತಾವರಣ ಇದ್ದು, ಬಹಳ ಸಂತೋಷ ವಾಯಿತು. ಇದು ನಗರದ ಹೊರವಲಯ ದಲ್ಲಿರುವ ದೇವಸ್ಥಾನವಾಗಿದೆ.

ಇನ್ನು ನಾವು ಇಡೀ ಮೆಲ್ಬೋರ್ನ್‌ನಗರ ಸಂದರ್ಶನವನ್ನು 3 ಘಂಟೆಗಳಲ್ಲಿ ಯರ್ರಾ ನದಿಯಲ್ಲಿ ಕ್ರುಸರ್‌ನಲ್ಲಿ ಕುಳಿತು. ಮಾಡಿದೆವು. ಇದು 200 ಜನರು ಕುಳಿತುಕೊಳ್ಳುವ ಸಣ್ಣ ಹಡಗು ಆಗಿದೆ. ಮೆಲ್ಬೋರ್ನ್ ನಗರದ ಮಧ್ಯಭಾಗದಲ್ಲಿ ಈ ಯರ್ರಾನದಿಯಲ್ಲಿ ಹೋಗುವುದೇ ಒಂದು ವಿಸ್ಮಯವಾಗಿದೆ. ಇದರಲ್ಲಿ ಕುಳಿತರೆ ಎಲ್ಲಾ ಪ್ರಮುಖ ಸ್ಥಳಗಳು, ಆಫೀಸ್ ಗಗನ ಚುಂಬಿ ಕಟ್ಟಡಗಳು, ಮೆಲ್ಬೋರ್ನ್ ಕ್ರಿಕೆಟ್ ಕ್ರೀಡಾಂಗಣ ಇನ್ನಿತರ ಪ್ರೇಕ್ಷಣೀಯ ಸ್ಥಳಗಳನ್ನು ನೋಡಬಹುದು. ಇಲ್ಲಿ ನಾವು ಓಷಿಯನ್ ಸಿಲೆ ಎಂಬ ಆಕರ್ಷಣೀಯ ಸ್ಥಳವನ್ನು ನೋಡಿದೆವು. ತಾಕ್ಲೆಂಡ್ ಇಲ್ಲಿರುವ ಪ್ರಮುಖ ಬಂದರು ಪ್ರದೇಶವಾಗಿದೆ. ಇಲ್ಲಿಯ ಇನ್ನೊಂದು ಪ್ರಮುಖ ಆಕರ್ಷಣೆ ಎಂದರೆ ಫ್ಲಿಂಡರ್ ಸ್ಟ್ರೀಟ್. ಇದು ನಗರದ ಹೃದಯ ಭಾಗವಾಗಿದೆ. 200 ವರ್ಷದ ಹಿಂದೆ ಫ್ಲಿಂಡರ್ ಎಂಬ ನಾವಿಕ ಈ ಭೂಭಾಗವನ್ನು ಕಂಡು ಹಿಡಿದ ಕಾರಣ ಇದನ್ನು ಫ್ಲಿಂಡರ್ ಸ್ಟ್ರೀಟ್ ಎಂದು ಕರೆಯುತ್ತಾರೆ.

ಇಲ್ಲಿ ನಾವು ನೋಡಿದ ಕೆಲವು ಪ್ರದೇಶಗಳೆಂದರೆ ನ್ಯಾಶನಲ್ ಗ್ಯಾಲರಿ ಆಫ್ ವಿಕ್ಟೋರಿಯಾ ಇಲ್ಲಿ ಪುರಾತನ ಕಾಲದ ಕಲಾಕೃತಿಗಳನ್ನು ಸಂಗ್ರಹಿಸಿಟ್ಟಿದ್ದಾರೆ. ಇದನ್ನು ನೋಡಲು 5–6 ಘಂಟೆಗಳಾದರೂ ಬೇಕಾಗುತ್ತದೆ. ವಿಲಿಯಮ್ಸ್ ಟೌನ್, ಟಕ್ ಲ್ಯಾಂಡ್ ಪ್ರದೇಶಗಳೂ ಪ್ರಮುಖ ಪ್ರದೇಶಗಳಾಗಿವೆ. ನಮ್ಮ ಮನೆಯ ಹತ್ತಿರ ಇರುವ ಸೈಂಟ್ ಕಿಲ್ಡಾ ಬೀಚ್ ಅಂತೂ ಜನ ಜಂಗುಳಿಯಿಂದ ಕೂಡಿರುತ್ತದೆ. ಏಕೆಂದರೆ ಇಲ್ಲಿ ಕತ್ತಲಾಗುವಾಗ ಬರುವ ಪೆಂಗ್ವಿನ್ ಹಕ್ಕಿಗಳ ವಾಕಿಂಗ್. ಇದನ್ನು ನೋಡಲೆಂದೇ ಜಾತ್ರೆಯಂತೆ ಸಾವಿರಾರು ಜನರು ಪ್ರತಿದಿನ ಬರುತ್ತಾರೆ.

ಇಲ್ಲಿ ಹೆಚ್ಚಿನ ಎಲ್ಲಾ ಮನೆಗಳಲ್ಲಿ ಕಾರುಗಳಿವೆ. ಮತ್ತು 75% ಜನರು ನಾಯಿಗಳ ಜೊತೆ ವಾಕಿಂಗ್ ಬರುತ್ತಾರೆ. ಸಣ್ಣ ನಾಯಿಯಿಂದ ದೊಡ್ಡ ಗಾತ್ರದ ನಾಯಿಗಳು ಕೆಲವೊಮ್ಮೆ 4–5 ನಾಯಿಗಳೊಂದಿಗೆ ವಾಕಿಂಗ್ ಬರುತ್ತಾರೆ. ಈ ಪ್ರದೇಶದಲ್ಲಿ ಬಹಳ ಜಾಗವಿದೆ. ಆದರೆ ಜನರೇ ಇಲ್ಲ. ಇಲ್ಲಿ ಪ್ಲಾಟ್‌ಗಳು ಇಲ್ಲದೆ, ಒಂಟಿ ಮನೆಗಳೇ ಈ ನಗರದಲ್ಲಿ ಇದೆ. ಇಲ್ಲಿಯ ರಾಷ್ಟ್ರೀಯಾ ಪ್ರಾಣಿಯಾದ ಕಾಂಗರೂಗಳ ಸಂಖ್ಯೆ, ಈ ದೇಶದ ಜನಸಂಖ್ಯೆಗಿಂತ ಇಮ್ಮಡಿ ಇದೆ ಎಂದು ಓದಿದ್ದೇನೆ.

ಅಂತೂ ನಮ್ಮ ಒಂದು ತಿಂಗಳ ಮೆಲ್ಬೋರ್ನ್‌ನಗರ ಪ್ರವಾಸವನ್ನು ಮುಗಿಸಿ ಏಪ್ರಿಲ್ 17 ರಂದು ಸಿಂಗಾಪುರ, ಬೆಂಗಳೂರು ಮೂಲಕ ಇನ್ನೊಬ್ಬ ಮಗ ಬೆಂಗಳೂರಿನ ಸುಪ್ರೀತ್ ಮನೆಗೆ ಬಂದು, ತಾ. 25.04.2019 ರಂದು ನಮ್ಮ ಮನೆ ಪರ್ಕಳಕ್ಕೆ ಬಂದಾಗ ಮರೆಯಲಾಗದ ಅನುಭವಗಳನ್ನು ಹೊತ್ತುಕೊಂಡು ಬಂದೆವು.

## ಭಕ್ತಿಗೀತೆ–6

ಪಾರುಗಾಣಿಸೊ ಜನ್ಮ ಪಾರ್ವತೀ ತನಯ
ಪಾಮರನು ಬೇಡುವೆನು ಕರುಣೆತೋರಿಸೆಯಾ
॥ಪಲ್ಲವಿ॥

ಪಾವಂಜೆ ಕ್ಷೇತ್ರದಲಿ ಪೂಜೆಯನು ಕೊಂಬುವನು
ಪ್ರಾರ್ಥನೆಯ ಮನ್ನಿಸೊದೇವ ಫಾಲಾಕ್ಷಸುತನೆ
॥ಅನುಪಲ್ಲವಿ॥

ಪಾರುಗಾಣಿಸೊ ದೇವ ಪಾರ್ವತೀ ತನಯ

ಅಂದಿನ ದಿನಗಳಲಿ ಬಂಧು ನನ್ನವರೆಂದು
ಹಂಬಲಿಸಿ ಮರುಗುತಲಿ ಇಂಬಾಗಿ ಸಲಹಿದೆನು
ಇಂದೆಲ್ಲಿ ಬಂಧುಗಳು? ಹಿಂದಿನದ ಮರೆತಿಹರು
ಕುಂದುಗಳ ತೋರುವರು ಜಂಭದಲಿ ಮೆರೆಯುವರು
ಪಾರುಗಾಣಿಸೊ ಜನ್ಮ ಪಾರ್ವತೀ ತನಯ

ಗಣ್ಣನಾದರೆ ನೀನು ಸಂಬಂಧ ಹುಡುಕುತ ಬಂಧು
"ಅಣ್ಣ ಅಯ್ಯ" ಯೆಂದು ಸುತ್ತಿ ಸ್ತುತಿಸುವರು
ಬೆಣ್ಣೆ ತೀರಿತೆ ಮುಂದೆ ತಣ್ಣನೆಯ ದಿನಬರಲು
ಸುಣ್ಣದಲಿ ಸುತ್ತುವರು ನೀರಿಗೆಸೆಯುವರು
ಪಾರುಗಾಣಿಸೊ ಜನ್ಮ ಪಾರ್ವತೀ ತನಯ

ಎನ್ನೊಡನೆ ಹುಟ್ಟಿರುವ ಎನ್ನೊಡನೆ ಬೆಳೆದಿರುವ
ಎನ್ನದೆನ್ನುವ ಕಣ್ಣು ಕೈ ಕಾಲು ಕಿವಿಯು
ಎನ್ನಾಜ್ಞೆ ಪಾಲಿಸದೆ ಬಂಡಾಯ ಹೂಡಿರಲು
ಅನ್ಯರನು ದೂರುವುದೇನು? ಬಂಧುಗಳ ಮಾತೇನು?
ಪಾರುಗಾಣಿಸೊ ಜನ್ಮ ಪಾರ್ವತೀ ತನಯ

ಕೊನೆಗಾಲ ಬಂದಿಹುದು ಕತ್ತಲೆಯ ತಂದಿಹುದು
ನಿನ್ನೆ ಮೊನ್ನೆಗಳೆಲ್ಲ ಗತಕಾಲ ಸೇರಿಹುದು
ನಿನ್ನಿಂದಲೇ ಬಂದೆ ನಿನ್ನನಾಗಿಸು ತಂದೆ
ಪನ್ನಾಗ ರೂಪಧರ ದಾಸನು ಬೇಡಿಕೊಂಬೆ

ಪಾರುಗಾಣಿಸೊ ದೇವ ಪಾರ್ವತೀ ತನಯ
ಪಾಮರನು ಬೇಡುವೆನು ಕರುಣೆತೋರಿಸೆಯಾ
ಪಾವಂಜೆ ಕ್ಷೇತ್ರದಲಿ ಪೂಜೆಯನು ಕೊಂಬುವನೆ
ಪ್ರಾರ್ಥನೆಯ ಮನ್ನಿಸೊ ದೇವ ಫಾಲಾಕ್ಷಸುತನೇ
ಶ್ರೀ ಶ್ರೀ ಶ್ರೀ

–ಅಪಯಶ, ಬೆಂಗಳೂರು

## ಶ್ರೀ ಸುಬ್ರಹ್ಮಣ್ಯ ಸಭಾದಿಂದ ಶ್ರೀ ಶಂಕರ ಭಗವತ್ಪಾದರ ಕಿರು ನಾಟಕ



ಜಿಲ್ಲಾ ಶ್ರೀ ಶಂಕರ ಜಯಂತಿ ಆಚರಣೆಯು ದಿನಾಂಕ 12-05-2019ರ ಭಾನುವಾರ ಬೆಳಿಗ್ಗೆ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ನೆರವೇರಿತು. ಅಂದು ಶ್ರೀ ಪ್ರಭಾಕರ ಮತ್ತು ಶ್ರೀಮತಿ ಉಷಾ ದಂಪತಿಗಳು ನಡೆಸಿಕೊಟ್ಟ ಗಣಹೋಮದೊಂದಿಗೆ ಕಾರ್ಯಕ್ರಮ ಆರಂಭವಾಯಿತು. ಭಕ್ತರು ಶಂಕರಾಚಾರ್ಯರ ಅಷ್ಟೋತ್ತರ. ಭಗವದ್ಗೀತೆ ಪಾರಾಯಣ. ವಿಷ್ಣುಸಹಸ್ರನಾಮ ಪಾರಾಯಣವನ್ನು ನಡೆಸಿದರು. ಶ್ರೀ ಸದಾಶಿವ ಶಾಸ್ತ್ರಿಯವರು ರುದ್ರ ಪಠಣದೊಂದಿಗೆ ಅಭಿಷೇಕವನ್ನು ನಡೆಸಿದರು. ಶ್ರೀಮತಿ ಪಂಕಜ ಮಾಲಾ ದಂಪತಿಗಳು ಶ್ರೀ ಸತ್ಯನಾರಾಯಣ ಪೂಜೆಯ ಸೇವಾಕರ್ತೃಗಳಾಗಿದ್ದರು. ಶ್ರೀ ವಾಗೀಶ್ವರಿ ಶಿವರಾಂರವರು ಶಂಕರಾಚಾರ್ಯರ ಕುರಿತು ಪ್ರವಚನವನ್ನು ನೀಡಿದರು. ಪ್ರಸಾದ ಭೋಜನದ ನಂತರ ಶ್ರೀ ಸುಬ್ರಹ್ಮಣ್ಯ ಸಭಾ ಸದಸ್ಯರಿಂದ ಕನಕಧಾರಾ ಸ್ತೋತ್ರದಿಂದ ಆಯ್ದುಕೊಂಡ ಕಿರುನಾಟಕ ಜರಗಿತು. ಮಹಿಳಾ ವೇದಿಕೆ ಅಧ್ಯಕ್ಷೆ ಕುಸುಮಾ ನವೀನ ಕುಮಾರ್ ನಿರೂಪಣೆಯಿತ್ತರು. ಶಂಕರಾಚಾರ್ಯ ಪಾತ್ರದಲ್ಲಿ ಶರಣ್ಯ ರಾವ್, ಆರ್ಯಾಂಬೆಯಾಗಿ ಕನಕವಲ್ಲಿ ಹರ್ಷ ಕುಮಾರ್, ವಟುಗಳಾಗಿ ಗೌರವ್ ರಾವ್, ಶ್ರೇಷ್ಠ ರಾವ್, ಶ್ರೇಯಾಂಕ್, ಹಾರ್ದಿಕ್ ರಾವ್, ಗುರುಗಳಾಗಿ ಶ್ರೀ ಸಭಾದ ಅಧ್ಯಕ್ಷರಾದ ಶ್ರೀ ಹರ್ಷ ಕುಮಾರ್ ಕೇದಿಗೆ, ಬಡವಿಯಾಗಿ ಪುಷ್ಪಾವತಿ ಶ್ರೀನಿವಾಸ್ ರಾವ್, ದೇವಿಯಾಗಿ ರಮ್ಯ ಶಾಂತರಾಂ ನಟಿಸಿ ಅಪಾರ ಮೆಚ್ಚುಗೆಯನ್ನು ಪಡೆದರು. ಹಿನ್ನಲೆಯಲ್ಲಿ ಸುಮಂಗಲಾ ಪ್ರಭಾಕರ ಸ್ನೇಹಲತಾ ದಿವಾಕರ್, ಭುವನೇಶ್ವರಿ ನಾಗರಾಜ ರಾವ್, ಉಷಾ ಪ್ರಭಾಕರ್, ಮಮತಾ ಸಾಂತೂರಕರ್ ಸಹಕರಿಸಿದರು. ನಂತರ ಮಹಿಳಾ ವೇದಿಕೆ ವತಿಯಿಂದ ಭಜನೆಯನ್ನು ನಡೆಸಲಾಯಿತು. ವಿವಿಧ ಭಜನಾ ತಂಡದವರು ಭಜನೆಯನ್ನು ನಡೆಸಿಕೊಟ್ಟರು. ಮಂಗಳದೊಂದಿಗೆ ಆ ದಿನದ ಕಾರ್ಯಕ್ರಮ ಮುಕ್ತಾಯವಾಯಿತು.

## ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಶ್ರೀ ಶಂಕರ ಜಯಂತಿ ಆಚರಣೆ



ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ದಿನಾಂಕ 11-05-2019ರಂದು ಶನಿವಾರ ಸಾಯಂಕಾಲ "ಶ್ರೀ ಶಂಕರ ಜಯಂತಿ"ಯನ್ನು ಶ್ರದ್ಧಾ ಭಕ್ತಿಯಿಂದ ಆಚರಿಸಲಾಯಿತು. ವಿವಿಧ ಪಾರಾಯಣವನ್ನು ಸದಸ್ಯರು ನಡೆಸಿದರು. ಶ್ರೀ ದುರ್ಗಾಪೂಜೆಯನ್ನು ಸೇವಾ ಕರ್ತೃಗಳಾಗಿ ಶ್ರೀ ಶ್ರೀನಿವಾಸ ರಾವ್ ಮತ್ತು ಶ್ರೀ ಪುಷ್ಪಾವತಿ ದಂಪತಿಯವರು ನಡೆಸಿಕೊಟ್ಟರು. ಶಂಕರಾಚಾರ್ಯರ ಕುರಿತು ಶ್ರೀ ಗೋಪಿನಾಥ್ ರಾವ್ ಪ್ರವಚನವನ್ನು ನೀಡಿದರು. ಈ ಕಾರ್ಯಕ್ರಮದಲ್ಲಿ ಸಭೆಯ ಅಧ್ಯಕ್ಷರಾದ ಶ್ರೀ ಹರ್ಷ ಕುಮಾರ್ ಕೇದಿಗೆ ಹಾಗೂ ಮಹಿಳಾ ವೇದಿಕೆ ಅಧ್ಯಕ್ಷೆ ಶ್ರೀಮತಿ ಕುಸುಮಾ ನವೀನ್ ಕುಮಾರ್, ಯುವ ವೇದಿಕೆಯ ಕಾರ್ಯದರ್ಶಿ ಶ್ರೀ ಸುರೇಶ್ ಕಡಬ, ಸಭೆಯ ಉಪಾಧ್ಯಕ್ಷರಾದ ಡಾ. ಎ. ಪಿ. ಕೃಷ್ಣ, ಶ್ರೀಮತಿ ಸುಮಂಗಲ ಪ್ರಭಾಕರ್ ಕಾರ್ಯದರ್ಶಿಗಳಾದ ಶ್ರೀ ಕರುಣಾಕರ ಬೆಳ್ಳೆ, ಜೊತೆ ಕಾರ್ಯದರ್ಶಿ ಶ್ರೀ ಅನಿಲ್ ರಾವ್ ಬಿ. ಎಸ್., ಶ್ರೀ ಚೇತನ್ ಶರ್ಮ ಉಪಸ್ಥಿತರಿದ್ದರು. ಬೆಂಗಳೂರಿನ ಸ್ಥಾನಿಕ ಸಭೆಯ ಅಧ್ಯಕ್ಷರಾದ ರವೀಂದ್ರನಾಥ ಬೆಳ್ಳೆ ಭಾಗವಹಿಸಿದ್ದರು. ಈ ಕಾರ್ಯಕ್ರಮವನ್ನು ಸಭೆಯ ಕೋಶಾಧಿಕಾರಿಗಳಾದ ಶ್ರೀ ಪಿ. ಶ್ರೀಕಾಂತ್ ರಾವ್ ನಿರೂಪಿಸಿದರು. ಪ್ರಸಾದ ಭೋಜನದೊಂದಿಗೆ ಅಂದಿನ ಕಾರ್ಯಕ್ರಮ ಸಂಪನ್ನಗೊಂಡಿತು.

## ಸುಂದರಮ್ಮನ ಸೌಂದರ್ಯ ಪ್ರಜ್ಞೆ

**ಲೇಖಕ ಜಿ.ಕೆ. ಕೋಲ್ಪೆ**

ನಮ್ಮ ಬೀದಿಯ ಮೂಲೆಮನೆಯ ಪಕ್ಕವೇ ಕಥಾನಾಯಕಿ ಸುಂದರಮ್ಮನ ಬಾಡಿಗೆ ಮನೆ. ವಯಸ್ಸು ಸುಮಾರು 66 ಆಗಿರಬಹುದು. ಗಂಡ ಶ್ರೀಮಾನ್ ಮಂದಣ್ಣ -76 ರ ಆಜು-ಬಾಜು. ಅದೊಂದು ದಿನ ಸುಂದರಮ್ಮ ಶೃಂಗಾರ ಭರಿತರಾಗಿ ಸಂಜೆ ಪೇಟೆ ಕಡೆಗೆ ನಡೆಯುತ್ತಿದ್ದಂತೆ, ಮೋಟಾರ್ ಬೈಕಿನಲ್ಲಿ ಬಂದ ಖದೀಮರಿಬ್ಬರು ಅವರ $4^1/_2$ ಪವನಿನ ಕರಿಮಣಿ ಸರವನ್ನು ಕತ್ತಿನಿಂದ ಎಳೆದು ಪರಾರಿಯಾದರಂತೆ. ಅವರ ಕಿರುಚಾಟ - ಬೊಬ್ಬೆ ಉಪಯೋಗವಾಗದೆ, ಕಳ್ಳರು ಸಂದಿ-ಗೊಂದಿಗಳಲ್ಲಿ ಬೈಕ್ ಚಲಾಯಿಸಿ ಅದೃಶ್ಯರಾದರಂತೆ. ಅಂತೂ ಕಷ್ಟಪಟ್ಟು ಉಳಿಸಿ ಇತ್ತೀಚೆಗೆ ಮಾಡಿಸಿದ ಬಂಗಾರದ ಸರ ಕಳಕೊಂಡು ತಲೆ ಮೇಲೆ ಕೈಹೊತ್ತು ಕೊಂಡರು. ಬೀದಿಮನೆಯವರು ಎದುರಿಗೆ ಪಶ್ಚಾತ್ತಾಪ ತೋರಿಸಿ ಹಿಂದಿನಿಂದ ಏನೇನೋ ಮಾತಾಡಿಕೊಂಡರು. "ಈ ವಯಸ್ಸಲ್ಲೂ " ಆಯಮ್ಮನ" ಶೃಂಗಾರ ಜಾಸ್ತಿಯಾಯ್ತು. ಆ ಸರವನ್ನು ಪ್ರದರ್ಶಿಸುವುದು ಅತಿಯಾಯ್ತು. ಅಲ್ಲದೆ ಮಾತು ಕೂಡಾ ದೊಡ್ಡ ಜನರ ಹಾಗೆ" ಇತ್ಯಾದಿ. ಹಾಗೆಂದು ಯಾವುದೇ ಸಾರ್ವಜನಿಕ ಕೆಲಸಗಳಿಗೆ ಸುಂದರಮ್ಮನೇ ಬೇಕು. ಸ್ವಚ್ಛತಾ ಆಂದೋಲನದಲ್ಲಿ ಪೊರಕೆ ಹಿಡಿದು ಬೀದಿಗುಡಿಸುವುದರಲ್ಲಿ ಅವರು "ಎತ್ತಿದ ಕೈ" ಕೆಲಸ ಮುಗಿಸಿದ ಮೇಲೆ, ಆಯೋಜಿಸಿದವರು ಸರಿಯಾಗಿ ಚಾ-ತಿಂಡಿ ಕೊಡದಿದ್ದರೆ ತರಾಟೆಗೆ ತೆಗೆದುಕೊಳ್ಳುವ ಸ್ವಭಾವ. ಮಹಿಳಾವೇದಿಕೆಗಳ ಕಾರ್ಯಕ್ರಮಕ್ಕೆ ಹಾಜರ್. ಪ್ರವಾಸ ಹೊರಟರೆ, ಖಾಯಂ ಮೆಂಬರ್, ಅಂತೂ ನಮ್ಮ ಭಾಗದಲ್ಲಿ ಪ್ರತಿಯೊಬ್ಬರನ್ನು ಮಾತಾಡಿಸುತ್ತಾ, ಸರಕಾರದಿಂದ ಸಿಗುವ ಸೌಲಭ್ಯಗಳನ್ನು ಕಾರ್ಯಕರ್ತರ ಮೂಲಕ ಗಿಟ್ಟಿಸುವ ಗಟ್ಟಿಗಿತ್ತಿ ಅವರಾಗಿದ್ದರು. ದೂರದೂರುಗಳಲ್ಲಿ ದುಡಿಯುತ್ತಿರುವ ಮಕ್ಕಳ ಸಹಕಾರದಿಂದ, ತಮ್ಮ ಕುಡಕ ಪತಿಯನ್ನು ಸಂಭಾಳಿಸುತ್ತಾ, ಕಷ್ಟದ ಜೀವನ ಸಾಗಿಸುತ್ತಾ, ಸಂತಸದಿಂದ ಬಾಳುತ್ತಿದ್ದರು.

ವಾರದ ಹಿಂದೆ ನಾನು ಕ್ಷೌರಕ್ಕೆ ಹೋದಾಗ, ಅವರ ಪತಿರಾಯ ಕ್ಷೌರಿಕನಿಗೆ ತಲೆ ಒಪ್ಪಿಸಿಯಾಗಿತ್ತು. ಇನ್ನೇನು ಮುಗಿಯುವ ಹಂತದಲ್ಲಿದ್ದಾಗ, ಸುಂದರಮ್ಮ ಬಡಬಡ ಬಂದವಳೇ "ಭಂಡಾರಿಯಣ್ಣ ಯಜಮಾನರ ತಲೆ ಪೂರಾ ಬೋಳಿಸಿದ್ರಾ? ಮೀಸೆ ಕೂಡಾ ಕಾಣುವುದಿಲ್ಲ? ಇನ್ನು 15 ದಿನಗಳಲ್ಲಿ ನಮ್ಮ ಮದುವೆಯ 50 ನೇ ವಾರ್ಷಿಕೋತ್ಸವವಿದೆ. ಅವರು ಚಂದಕಾಣಬೇಕಲ್ಲವೇ? ತಲೆಕೂದಲು - ಮೀಸೆ ಸ್ವಲ್ಪವಾದರೂ ಬೆಳೆಯಬಹುದಾ? ಇತ್ಯಾದಿ ಪ್ರಶ್ನೆ ಹಾಕಿ ತರಾಟೆಗೆ ತೆಗೆದುಕೊಂಡಳು. " ನೀವು ಕಾಲುಘಂಟೆ ಮೊದಲು ಬಂದು ಹೇಳುತ್ತಿದ್ದರೆ, ನಿಮಗೆ ಬೇಕಾಗುವ ಹಾಗೆ ಕತ್ತರಿಸಬಹುದಿತ್ತು. ಈಗ ನಾನೇನು ಮಾಡಲು ಸಾಧ್ಯ? ಯಜಮಾನರು ಈ ವಿಷಯ ಹೇಳಲೇ ಇಲ್ಲ." ಎಂದ ಕ್ಷೌರಿಕ, "ಈಗಲೂ ಅಜ್ಜಯ್ಯ ಸುಂದರವಾಗಿ ಕಾಣುತ್ತಿದ್ದಾರೆ, ಬೇಸರಿಸಬೇಡಿಯಮ್ಮ" ಎನ್ನುತ್ತಾ ಅವರನ್ನು ಸಾಗಹಾಕಿದ. ತಲೆಗೆ ಎಣ್ಣೆ ಹಾಕಿ ಪಟಪಟ ಬಡಿದು ಮಾಲೀಶ್ ಮಾಡಿ "ಅಜ್ಜಯ್ಯ, ಇನ್ನು ಮನೆಗೆ ಹೋಗಿ "ಎಣ್ಣೆ ಹಾಕಿ" ಮಲಗಿ ಎಂದ. ಕೂಡಲೇ ಮುದುಕಪ್ಪ , ನಿನಗೆ ಕೊಡುವ ಹಣ ಅದಕ್ಕೆ ಉಪಯೋಗಿಸುತ್ತೇನೆ, ಆಗದಾ? ಎನ್ನುತ್ತಾ " ನಿನ್ನ ಋಣ ಬೇಡ ಮಾರಾಯ ತೆಗೆದು ಕೊ". ಹಣ ಪಾವತಿಸಿ ಶ್ರೀಮಾನ್ ಮಂದಣ್ಣರು ನಿರ್ಗಮಿಸಿದರು.

ಸೌ। ಸುಂದರಮ್ಮ, ದಾಂಪತ್ಯದ ಸುವರ್ಣ ಸಂಭ್ರಮ ಕಾರ್ಯಕ್ರಮಕ್ಕೆ ನಮ್ಮನ್ನು ಆಮಂತ್ರಿಸಲು ಮರೆಯಲಿಲ್ಲ.

## ರಥಬೀದಿ ಪ್ರಸಂಗ

**ಲೇಖಕ ಜಿ.ಕೆ. ಕೋಲ್ಪೆ**

ಅದೊಂದು ಸಂಜೆಯ ಆರಾಮ ನಡಿಗೆಯಲ್ಲಿ ಉಡುಪಿ ರಥಬೀದಿಗೆ ಬಂದವ ಸುಸ್ತು ಪರಿಹರಿಸಲು ಸಿಮೆಂಟ್ ಒರಗು ಬೆಂಚಿನಲ್ಲಿ ಕೂತು ಅನಂತೇಶ್ವರನ ಗರ್ಭಗುಡಿಯ ಶಿಖರದ ಕಲಶಗಳನ್ನು ನೋಡುತ್ತಾ ಶಿವಧ್ಯಾನ ಮಾಡುತ್ತಿರುವಾಗ ಅವಸರ ಅವಸರವಾಗಿ ಬರಿಗಾಲಲ್ಲಿ ನಡೆದು ಬಂದು ಪಕ್ಕದಲ್ಲಿ ಕುಳಿತ ನನ್ನ ಹಾಗೆ ವಯಸ್ಸಾದ ವ್ಯಕ್ತಿಯ ಬಗ್ಗೆ ಆಸಕ್ತಿ ಮೂಡಿತು. ಅವರೇ ಮೊದಲು ನಮಸ್ಕರಿಸಿ ತಮ್ಮನ್ನು ಪರಿಚಯಿಸುತ್ತಾ ಬ್ಯಾಂಕೊಂದರ ವ್ಯವಸ್ಥಾಪಕರಾಗಿ 8-10 ವರ್ಷಗಳ ಹಿಂದೆ ನಿವೃತ್ತಿ ಪಡೆದಿದ್ದು, ಅವರ ತಂದೆಯವರ 'ಶ್ರಾದ್ಧ' ಸಂಬಂಧ ಮಠಕ್ಕೆ ಬಂದಿದ್ದರೆಂದು ತಿಳಿಸಿ, ಅವರ ಬರಿಗಾಲ ನಡಿಗೆಯನ್ನು ನಾನು ಗಮನಿಸಿರಬೇಕೆಂದು ಶಂಕಿಸುತ್ತಾ " ಹಾಳು ಮರೆವು ಸ್ವಾಮಿ, ಚಪ್ಪಲಿ ಮಠದ ಮುಂದೆ ಬಿಟ್ಟಿದ್ದು ಹಿಂದಿರುಗುವಾಗ ಮೆಟ್ಟುಕೊಳ್ಳುವೆ"ನೆಂದರು. 'ನನಗೆ ವಯಸ್ಸು 72 ದಾಟಿದ್ದು ಈ ಮರೆವಿನ ರೋಗ (ಅಲ್‌ಜೈಮರ್) ಇಷ್ಟು ಬೇಗ ವಕ್ಕರಿಸಿದೆ. ಅದಿರಲಿ, ತಮ್ಮ ಪರಿಚಯ?" ಎಂದರು. "ನಾನೂ ನಿಮ್ಮಹಾಗೆ ಬ್ಯಾಂಕ್ ಹಿರಿಯ ವ್ಯವಸ್ಥಾಪಕನಾಗಿ ನಿವೃತ್ತಿ ಪಡೆದು, ಈಗ ವಯಸ್ಸು 79 ರ ಆಜು-ಬಾಜಿನಲ್ಲಿದ್ದೇನೆ. ಸಂಜೆಯ ಆರಾಮ ನಡಿಗೆಯ ಮಧ್ಯೆ ಇಲ್ಲಿ ಈಗ ಅಲ್ಪ ವಿಶ್ರಾಂತಿ"ಎಂದೆ. ಅವರು ಮಾತು ಮುಂದುವರಿಸುವ ಇರಾದೆಯಿಂದ, "ನನ್ನ ಮನೆಯವಳು ಮಗಳ ಎರಡನೇ ಬಾಣಂತನಕ್ಕೆ ದುಬೈಗೆ ಹಾರಿದ್ದಾಳೆ. ಪ್ರತೀ ವರ್ಷ ಸ್ವಗೃಹದಲ್ಲೇ ಗೌಜಿಯಿಂದ ಶ್ರಾದ್ಧ-ಪೂಜಾದಿಗಳನ್ನು ಮಾಡಿಸುತ್ತಿದ್ದಳು. ಇನ್ನು ಯಾವಾಗ ಅವಳ ಆಗಮನವೋ ಗೊತ್ತಿಲ್ಲ. ಈ ವಿಶ್ರಾಂತ ಜೀವನದಲ್ಲಿ ಒಂಟಿ ಬಾಳು ಸಾಕಾಗಿದೆ" ಎಂದರು. 'ಇಲ್ಲೇ 2-3 ಕಿ.ಮೀ. ದೂರದಲ್ಲಿ ಸ್ವಂತ ಮನೆ ಇದೆ. ತಕ್ಕ ಮಟ್ಟಿಗೆ ಅನುಕೂಲವಾಗಿದ್ದೇನೆ. ಮಗ-ಸೊಸೆ ಬೇರೆ ಊರಲ್ಲಿದ್ದಾರೆ. ಕಡೆಗಾಲಕ್ಕೆ ನಾವು-ನಾವೇ" ಎನ್ನುತ್ತಿದ್ದಂತೆ ಅವರ ಧ್ವನಿ ಗದ್ಗದಿತವಾದಂತೆನಿಸಿತು. "ಸ್ವಾಮಿ, ಇದು ಹೆಚ್ಚಿನ ಸಂಸಾರಗಳ ಕಥೆ-ವ್ಯಥೆ. ಎಲ್ಲರ ಮನೆಯ ದೋಸೆ ತೂತೇ. ನಾವು ಪಡೆದುಕೊಂಡು ಬಂದ ಭಾಗ್ಯ. ಬೇಸರಿಸದಿರಿ" ಎಂದೆ. "ಹೌದೌದು, ಏನಿದ್ದರೇನು? ಮಕ್ಕಳು-ಮರಿಮಕ್ಕಳೊಂದಿಗೆ ಬಾಳುವ ಯೋಗ ಭಗವಂತ ಕರುಣಿಸಿಲ್ಲ. "ಎನ್ನುತ್ತಾ ಕಣ್ಣೊರಸಿಕೊಂಡರು. ಸಮಾಧಾನ ಪಡಿಸುತ್ತಾ "ಸ್ವಾಮಿ, ಕೆಲವು ಮಕ್ಕಳು ರೆಕ್ಕೆ-ಪುಕ್ಕ ಬಲಿತು ಸಂಗಾತಿಯೊಂದಿಗೆ ಹಾರಿಹೋಗುತ್ತಾ, ವೃದ್ಧ ಮಾತಾ-ಪಿತೃಗಳನ್ನು ಇನ್ನೊಂದು " ಆಶ್ರಯ" ಗೂಡಿಗೆ ಕಳುಹಿಸುವ ಈ ಸಂಕ್ರಮಣ ಕಾಲದಲ್ಲಿ, ನಮ್ಮ ಜೀವನ ಅದಕ್ಕಿಂತ ಭಿನ್ನವಾಗಿಲ್ಲವೇ? ಪೊಡವಿಗೊಡೆಯ ನಮ್ಮ ಕೈ ಬಿಡಲಾರ, ಚಿಂತಿಸದಿರಿ" ಎಂದೆ. "ಖಂಡಿತ" ಎನ್ನುತ್ತಾ ಜಗ್ಗನೆ ಎದ್ದು "ಬನ್ನಿರಾಯರೇ ಎದುರಿನ ಹೋಟೆಲ್ "ಮಿತ್ರ ಸಮಾಜ" ದಲ್ಲಿ 'ಚಾಯ್ ಪೇ ಚರ್ಚಾ' ನಡೆಸಿ ಸ್ವಲ್ಪ ಕಾಲಹರಣ ಮಾಡೋಣ ಎಂದು ಹಾಸ್ಯಭರಿತ ಧಾಟಿಯಲ್ಲಿ ಹೇಳಿದ್ದು ಸಮಾನ ಮನಸ್ಕನಾದ ನನಗೆ ಬಹಳ ಹಿತವೆನಿಸಿ ಅವರೊಂದಿಗೆ ಹೆಜ್ಜೆ ಹಾಕುತ್ತಾ, ಮುಂದಿನ ಭೇಟಿಯಲ್ಲಿ "ನನ್ನ ಸರದಿ" ಎಂದೆ.

## ನಿಧನ



### ಎನ್. ವಿ. ಕಿಷನ್ ಪ್ರಸಾದ್

ದ.ಕ. ಜಿಲ್ಲೆಯ ನಿವೃತ್ತ ಹೆಚ್ಚುವರಿ ಪೊಲೀಸ್ ಅಧೀಕ್ಷಕ ಎನ್. ವಿ. ಕಿಷನ್ ಪ್ರಸಾದ್(75) ಅವರು ತಾ.09.04.2019ರ ಮಂಗಳವಾರ ಹೃದಯಾಘಾತ ದಿಂದಾಗಿ ಬೆಂಗಳೂರಿನ ಸ್ವಗೃಹದಲ್ಲಿ ನಿಧನರಾದರು. ಅವರು ಪತ್ನಿ ಪುತ್ರ ಮತ್ತು ಪುತ್ರಿಯನ್ನು ಅಗಲಿದ್ದಾರೆ. ಅವರು ಬಂಟ್ವಾಳ, ತೀರ್ಥಹಳ್ಳಿ, ಬಸವನ ಬಾಗೆವಾಡಿ, ಬಿಜಾಪುರ, ವಿರಾಜಪೇಟೆ ಮೊದಲಾದೆಡೆ ವಿವಿಧ ಹುದ್ದೆಗಳನ್ನು ನಿರ್ವಹಿಸಿದ್ದರಲ್ಲದೆ ಮಾಜಿ ಪ್ರಧಾನಿಗಳ ಭದ್ರತಾ ವಿಭಾಗದಲ್ಲಿ ಮತ್ತು ಗುಪ್ತಚರ ಇಲಾಖೆಯಲ್ಲೂ ಸೇವೆ ಸಲ್ಲಿಸಿದ್ದರು. ಇವರು ತುಳುನಾಡಸಿರಿ ಕಾದಂಬರಿಯ ಲೇಖಕರಾದ ನಂದಳಿಕೆ ಡಾ.ವಾಸುದೇವ ರಾವ್ ಅವರ ಪುತ್ರರಾಗಿದ್ದಾರೆ. ಇವರ ನಿಧನಕ್ಕೆ ನಂದಳಿಕೆ ಶ್ರೀಮಹಾಲಿಂಗೇಶ್ವರ ದೇವಸ್ಥಾನದ ಧರ್ಮದರ್ಶಿ ಎನ್. ಸುಂದರರಾಮ ಹೆಗ್ಡೆ, ಚಾವಡಿ ಅರಮನೆಯ ಎನ್. ಸುಹಾಸ್ ಹೆಗ್ಡೆ, ಶಾಲಾ ಸಂಚಾಲಕ ವಿ.ಕೆ. ರಾವ್ ಸಂತಾಪ ವ್ಯಕ್ತಪಡಿಸಿದ್ದಾರೆ.



### ಕುಕ್ಕಿಕಟ್ಟೆ ಭೋಜರಾಯರು

ಉಡುಪಿ ಸುಬ್ರಹ್ಮಣ್ಯ ನಗರ ಕಲ್ಯಾಣಪುರದಲ್ಲಿ ವಾಸವಾಗಿದ್ದ ಕುಕ್ಕಿಕಟ್ಟೆ ಭೋಜರಾಯರು ತಾ.25.05.2019ರಂದು ನಿಧನ ಹೊಂದಿದರು. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ನಿಯಂತ್ರಣಾಧಿಕಾರಿಯಾಗಿದ್ದ ಅವರು ಉಡುಪಿಯ ಸ್ಥಾನಿಕ ಬ್ರಾಹ್ಮಣ ಸಂಘದಲ್ಲೂ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದಾರೆ. ಪಾವಂಜೆ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವಸ್ಥಾನಕ್ಕೂ ಟ್ರಸ್ಟಿಗಳಾಗಿ ಸುದೀರ್ಘ ಸೇವೆ ಸಲ್ಲಿಸಿದ್ದಾರೆ. ಅವರು ನಮ್ಮ ಸಮಾಜಕ್ಕೆ ಮೀಸಲಾಗಿದ್ದ “ಸುಲಗ್ನ” ಪತ್ರಿಕೆಯನ್ನು ಮುನ್ನಡೆಸುತ್ತಿದ್ದರು. ತನ್ನ ಅದ್ಭುತ ಸ್ಮರಣ ಶಕ್ತಿಯಿಂದ ನಮ್ಮ ಸಮಾಜದ ಬಹಳಷ್ಟು ಕುಟುಂಬಗಳ ಹುಟ್ಟು ನೆಲೆಗಳನ್ನು ನಿರರ್ಗಳವಾಗಿ ಹೇಳಬಲ್ಲವರಾಗಿದ್ದರು. ಶ್ರೀಯುತರು ಪತ್ನಿ ಶರ್ವಾಣಿ, ಪುತ್ರ ಅರವಿಂದ ಹಾಗೂ ಅಪಾರ ಬಂಧುಬಾಂಧವರನ್ನು ಅಗಲಿದ್ದಾರೆ. ಸಂಘವು ಶ್ರೀಯುತರ ನಿಧನಕ್ಕೆ ಸಂತಾಪ ವ್ಯಕ್ತಪಡಿಸುತ್ತಾ ಅವರ ಕುಟುಂಬಕ್ಕೆ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ನೀಡಲಿ ಎಂದು ಶ್ರೀ ಶಾರದೆಯಲ್ಲಿ ಪ್ರಾರ್ಥಿಸುತ್ತೇವೆ.



### ಶ್ರೀ ರಘುರಾಮರಾವ್

ವಡಬಾಂಢೇಶ್ವರ ನಿವಾಸಿ ಶ್ರೀ ರಘುರಾಮರಾಯರು ತಾ.19.05.2019 ರಂದು ತನ್ನ ಸ್ವಗೃಹದಲ್ಲಿ ನಿಧನ ಹೊಂದಿದರು. ಅವರು ಪತ್ನಿ ಹಾಗೂ ಈರ್ವರು ಪುತ್ರರನ್ನು ಅಗಲಿದ್ದಾರೆ.



### ಶ್ರೀ ಅಶೋಕ ಶ್ಯಾನುಭಾಗ್

ಚಿಟ್ಪಾಡಿ ನಿವಾಸಿ ಹಾಗೂ ಮಹಾರಾಷ್ಟ್ರದಲ್ಲಿ ಹೋಟೆಲು ಉದ್ಯಮಿಯಾಗಿದ್ದ ಶ್ರೀ ಅಶೋಕ್ ಶಾನುಭಾಗ್ ಇವರು ತಾ.17.05.2019 ರಂದು ನಿಧನ ಹೊಂದಿದರು.



### ಬಿ.ಕೆ. ಸೀತಾರಾಮ ರಾವ್

ಬೆಳ್ತಂಗಡಿ ತಾಲೂಕಿನ ಪ್ರಗತಿಪರ ಕೃಷಿಕ ಶ್ರೀ ಬಿ. ಕೆ. ಸೀತಾರಾಮ ರಾಯರು ತಾ.02.06.2019ರಂದು ನಿಧನ ಹೊಂದಿದರು. ಇವರು ಬೆಳ್ತಂಗಡಿ ಸಂಘದ ಕಾರ್ಯದರ್ಶಿ ಯಾಗಿಯೂ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ.



### ವಸಂತ ರಾವ್

ಮಹಾರಾಷ್ಟ್ರ ಸತಾರದ ಕೊರೆಗಾಂನಲ್ಲಿ ಸೋನ ಎಂಬ ಹೋಟೆಲು ಹಾಗೂ ವಸತಿಗೃಹದ ಉದ್ಯಮ ನಡೆಸುತ್ತಿದ್ದ ವಸಂತ ವಾಮನರಾವ್ ಕುಂಜಾರು ಇವರು ತಾ.07.05.2019ರಂದು ತನ್ನ 41ನೇ ವಯಸ್ಸಿನಲ್ಲಿ ನಿಧನ ಹೊಂದಿದರು.

### ಬೊಕ್ಕಸ ತಂಗಮ್ಮ

ಮೂಡಬಿದ್ರೆಯ ನಿವಾಸಿ ದಿವಂಗತ ರಾಮರಾಯರ ಪತ್ನಿ 97 ವರ್ಷ ಪ್ರಾಯದ ಶ್ರೀಮತಿ ಬೊಕ್ಕಸ ತಂಗಮ್ಮರವರು ತಾ.19.05.2019ರಂದು ನಿಧನ ಹೊಂದಿದರು.

## ಶುಭ ವಿವಾಹ

ಕಟಪಾಡಿ ಮಟ್ಟು ಶ್ರೀ ಕೃಷ್ಣಕುಮಾರ್ ಮತ್ತು ಶ್ರೀಮತಿ ಗೀತಾರವರ ಪುತ್ರಿ **ವೃಂದಾ** ಹಾಗೂ ಆಳುಗ್ಗೆಲು ಹಿರಿಯಡಕದ ಶ್ರೀ ಕೇಶವ ರಾವ್ ಮತ್ತು ಶ್ರೀಮತಿ ಮಾಲತಿ ಇವರ ಪುತ್ರ **ದೀಪಕ್** ಇವರ ವಿವಾಹವು ತಾ.29.05.2019ರಂದು ಉಡುಪಿ ಕುಂಜಿಬೆಟ್ಟಿನ ಶ್ರೀ ಶಾರದಾ ಮಂಟಪದಲ್ಲಿ ನೆರವೇರಿತು

★★★★ ★★★★

ಶ್ರೀಮತಿ ಆರುಂಧತಿ ಮತ್ತು ದಿ|ಸತ್ಯನಾರಾಯಣ ರಾವ್‌ರವರ ಪುತ್ರಿ **ಶ್ರೀದೇವಿ** ಹಾಗೂ ಕೆಮ್ಮಣ್ಣು ಶ್ರೀ ಕೆ. ಸತೀಶಕುಮಾರ್ ಮತ್ತು ಶ್ರೀಮತಿ ಸುಲೋಚನ ಇವರ ಪುತ್ರ **ಅನಂತ** ಇವರ ವಿವಾಹವು ತಾ 26.05.2019ರಂದು ನಾರಾವಿ ಸೂರ್ಯನಾರಾಯಣ ದೇವಸ್ಥಾನದ ಕಲ್ಯಾಣಮಂಟಪದಲ್ಲಿ ನೆರವೇರಿತು.

★★★★ ★★★★

ಕುಕ್ಕೆಹಳ್ಳಿ ಶ್ರೀಮತಿ ವಿದ್ಯಾ ಮತ್ತು ಶ್ರೀ ಪ್ರಕಾಶರಾಯರವರ ಪುತ್ರಿ **ಅನುಮಿತಾ** ಹಾಗೂ ಮಸ್ಕೆಬೈಲು ಶ್ರೀ ಗುರುಪ್ರಸಾದ ರಾವ್ ಮತ್ತು ಶ್ರೀಮತಿ ಸುಕನ್ಯಾ ಇವರ ಪುತ್ರ **ಸುದೀಪ** ಇವರ ವಿವಾಹವು ತಾ.13.05.2019ರಂದು ಪರ್ಕಳ ಸುರಕ್ಷಾ ಸಭಾಭವನದಲ್ಲಿ ನೆರವೇರಿತು

★★★★ ★★★★

ಬೆಂಗಳೂರು ಕೋನೇನ ಅಗ್ರಹಾರದ ಶ್ರೀಮತಿ ಲತಾ ಧಾರೇಶ್ವರ್ ಮತ್ತು ದಿ|ಮಧುಕರ್ ಧಾರೇಶ್ವರ್‌ರವರ ಪುತ್ರಿ **ಸಾರಿಕಾ** ಹಾಗೂ ಬೆಂಗಳೂರು ಶ್ರೀ ಎಸ್ ವಿ ವೆಂಕಟಾಚಲಂ ಮತ್ತು ಶ್ರೀಮತಿ ಜಯಂತಿ ಇವರ ಪುತ್ರ **ಸಾಯಿಪ್ರಸಾದ್** ಇವರ ವಿವಾಹವು ತಾ.16.05.2019ರಂದು ಬೆಂಗಳೂರು ಇಂದಿರಾನಗರದ ಮಂಗಳಧಾಮ ಕಲ್ಯಾಣಮಂಟಪದಲ್ಲಿ ನೆರವೇರಿತು

★★★★ ★★★★

ಬೆಂಗಳೂರು ಶ್ರೀಮತಿ ಪದ್ಮಶ್ರೀ ಮತ್ತು ಶ್ರೀ ಸುದೇಶ್ ಕುಮಾರ್ ಇವರ ಪುತ್ರಿ **ಡಾ| ಮೇಘನಾ** ಮತ್ತು ಕಟೀಲು ಶ್ರೀಮತಿ ಪ್ರೇಮಲತಾ ಮತ್ತು ಶ್ರೀ ಬಾಬು ರಾಜೇಂದ್ರಪ್ರಸಾದ್ ಇವರ ಪುತ್ರ **ಪ್ರಜ್ವಲ್** ಇವರ ವಿವಾಹವು ತಾ 26.05.2019 ರಂದು ಉಡುಪಿ ಕುಂಜಿಬೆಟ್ಟಿನ ಶ್ರೀ ಶಾರದಾ ಮಂಟಪದಲ್ಲಿ ನೆರವೇರಿತು.

## ಬ್ರಹ್ಮೋಪದೇಶ

### ಚಿ| ಸುಬ್ರಹ್ಮಣ್ಯ

ಶ್ರೀಮತಿ ಶಿಲ್ಪಾ ಮತ್ತು ಶ್ರೀ ಪಾದೆಬೆಟ್ಟು ಆನಂದ ದಂಪತಿಗಳು ತಮ್ಮ ಪುತ್ರ ಸುಬ್ರಹ್ಮಣ್ಯನ ಬ್ರಹ್ಮೋಪದೇಶ ಸಮಾರಂಭವನ್ನು ತಾ.23.05.2019ರಂದು ಪಾವಂಜೆ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವಸ್ಥಾನದ ಸಭಾಂಗಣದಲ್ಲಿ ನೆರವೇರಿಸಿದರು. ಅದೇ ಸಮಯದಲ್ಲಿ ವಟುವಿನ ಅಜ್ಜ ನಮ್ಮ ಸಮಾಜದ ಹಿರಿಯ ಸಾಧಕ ಶ್ರೀ ಸೋಮಶೇಖರರಾಯರ ಸಿದ್ಧಿ ಸಾಧನೆಗಳನ್ನು ಪರಿಚಯಿಸುವ ಪುಸ್ತಕವನ್ನು ಸಾಹಿತ್ಯ ಬಳಗ ಮುಂಬಯಿ ಇದರ ಅಧ್ಯಕ್ಷರಾದ ಶ್ರೀ ಹೆಚ್ ಬಿ.ಎಲ್. ರಾಯರು ಬಿಡುಗಡೆಗೊಳಿಸಿದರು.

### ಚಿ| ಚಿರಾಗ್

ಸುರತ್ಕಲ್ ಶ್ರೀ ಎಂ ಸುಕುಮಾರರಾವ್ ಮತ್ತು ಭಾರ್ಗವಿ ದಂಪತಿಗಳು ತಮ್ಮ ಪುತ್ರ ಚಿರಾಗ್‌ನ ಬ್ರಹ್ಮೋಪದೇಶ ಸಮಾರಂಭವನ್ನು ತಾ.23.05.2019ರಂದು ಕುಳಾಯಿಯ ಶ್ರೀ ವಿಷ್ಣುಮೂರ್ತಿ ದೇವಸ್ಥಾನದಲ್ಲಿ ನೆರವೇರಿಸಿದರು

### ಚಿ| ಅದ್ವೈತ್

ಶ್ರೀಮತಿ ಡಾ ಮೊನಿಕಾ ಮತ್ತು ಶ್ರೀ ಡಾ ಹರಿಕೇಶ್ ರಾವ್ ದಂಪತಿಗಳು ತಮ್ಮ ಪುತ್ರ ಅದ್ವೈತ್‌ನ ಬ್ರಹ್ಮೋಪದೇಶ ಸಮಾರಂಭವನ್ನು ತಾ.10.05.2019ರಂದು ಮಣಿಪಾಲದ ವೈಷ್ಣವಿ ಸಭಾಭವನದಲ್ಲಿ ನೆರವೇರಿಸಿದರು

### ಚಿ| ಶೌರ್ಯ

ಶ್ರೀಮತಿ ಸಲೋನಿ ಮತ್ತು ಶ್ರೀ ಪಿ ಗೌರೀಶ್ ರಾವ್ ದಂಪತಿಗಳು ತಮ್ಮ ಪುತ್ರ ಶೌರ್ಯನ ಬ್ರಹ್ಮೋಪದೇಶ ಸಮಾರಂಭವನ್ನು ತಾ.10.05.2019ರಂದು ಮಣಿಪಾಲದ ವೈಷ್ಣವಿ ಸಭಾಭವನದಲ್ಲಿ ನೆರವೇರಿಸಿದರು

### ಚಿ| ಅನಿರುದ್ಧ

ಮಂಗಳೂರಿನ ಶ್ರೀಮತಿ ಕೀರ್ತಿ ಮತ್ತು ಶ್ರೀ ಕಿರನ್ ಕುಮಾರ್ ದಂಪತಿಗಳು ತಮ್ಮ ಪುತ್ರ ಅನಿರುದ್ಧನ ಬ್ರಹ್ಮೋಪದೇಶ ಸಮಾರಂಭವನ್ನು ತಾ.16.05.2019ರಂದು ಮಂಗಳೂರಿನ ಸುಬ್ರಹ್ಮಣ್ಯ ಸದನದಲ್ಲಿ ನೆರವೇರಿಸಿದರು

### ಚಿ| ಸೌರಭ

ಎಲ್ಲೂರಿನ ಶ್ರೀಮತಿ ಸುಮಿತ್ರ ಹಾಗೂ ಶ್ರೀ ಶಿವಾನಂದ ದಂಪತಿಗಳು ತಮ್ಮ ಪುತ್ರ ಸೌರಭನ ಬ್ರಹ್ಮೋಪದೇಶ ಸಮಾರಂಭವನ್ನು ತಾ.29.05.2019ರಂದು ಎರ್ಮಾಳು ಶ್ರೀ ಜನಾರ್ಧನ ಜನಕಲ್ಯಾಣ ಸಭಾಂಗಣದಲ್ಲಿ ನೆರವೇರಿಸಿದರು


## ದೇವಿಕೃಪಾ ಏಜೆನ್ಸೀಸ್, ನಂದಿಕೂರು

ಫೋನ್ : 2556536 (R), 2555466 (O), Mobile : 9845149521



**ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.**

ಪ್ರೊ| ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು





## ಗೃಹಪ್ರವೇಶ

ಚೆನ್ನೈ ನಿವಾಸಿ ಶ್ರೀ ಎಲ್ಲೂರು ಪ್ರವೀಣ್ ಕುಮಾರ್ ಹಾಗೂ ಶ್ರೀಮತಿ ಗಾಯತ್ರಿ ದಂಪತಿಗಳು ಮುಲ್ಕಿ ಚಿತ್ರಾಪುವಿನಲ್ಲಿ ನೂತನವಾಗಿ ನಿರ್ಮಿಸಿದ ತನ್ನ ನಿವಾಸ “ನಕ್ಷತ್ರ” ಇದರ ಗೃಹಪ್ರವೇಶವನ್ನು ತಾ.17.05.2019ರಂದು ನೆರವೇರಿಸಿದರು.

★★★★ ★★★★

ಅಲೆವೂರು ಶ್ರೀ ಭಾಗ್ಯಚಂದ್ರ ರಾವ್ ಮತ್ತು ಶ್ರೀಮತಿ ಲತಾ ದಂಪತಿಗಳು ಉಡುಪಿ ಬನ್ನಂಜೆಯ ಸಿಲ್ವರ್ ಮೂನ್ ವಸತಿ ಸಮುಚ್ಚಯದಲ್ಲಿರುವ ತಮ್ಮ ನೂತನ ನಿವಾಸದ ಗೃಹ ಪ್ರವೇಶ ಸಮಾರಂಭವನ್ನು ತಾ.09.05.2019ರಂದು ನೆರವೇರಿಸಿದರು.


**ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನ, ಪಡುಬಿದ್ರಿ**

ಶ್ರೀ ಭಾರತೀ ಮಂಟಪ, ಉಡುಪಿ ಜಿಲ್ಲೆ, ಉದಯಾದ್ರಿ

ನಮ್ಮಲ್ಲಿ ಎಲ್ಲಾ ಶುಭ ಸಮಾರಂಭಗಳು, ಹೋಮ ಇತ್ಯಾದಿ ಕಾರ್ಯಕ್ರಮ ನಡೆಸುವರೇ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. – ಆಡಳಿತ ಮಂಡಳಿ

**ಶ್ರೀ ಉದಯಾದ್ರಿ ಮಠ, ಪಡುಬಿದ್ರಿ, ಉಡುಪಿ ಜಿಲ್ಲೆ**

ನಮ್ಮಲ್ಲಿ ಔರ್ಧ್ವಕ್ರಿಯೆ, ಶ್ರಾದ್ಧ ಇತ್ಯಾದಿ ಕಾರ್ಯಕ್ರಮ ನಡೆಸುವರೇ ವ್ಯವಸ್ಥೆಯನ್ನು ಕಲ್ಪಿಸಲಾಗುವುದು.
ಸಂಪರ್ಕಿಸಿರಿ : ನಯನಾಭಿರಾಮ ಸ್ವಾಮಿ : 9449101303, ಶ್ರೀನಿವಾಸ ಶರ್ಮ : 9945933363



ಪಡುಬಿದ್ರೆ ಶಿವಪ್ರಸಾದ ರಾವ್ ಹಾಗೂ ಗೀತಾ ದಂಪತಿಗಳ ಪುತ್ರಿ ಅಪೇಕ್ಷಾ ರಾವ್ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ 610 ಅಂಕ ಪಡೆದು ಉತ್ತೀರ್ಣಳಾಗಿದ್ದಾಳೆ ಅವಳು ಪಡುಬಿದ್ರೆಯ ಸಾಗರ್ ವಿದ್ಯಾಮಂದಿರದ ವಿದ್ಯಾರ್ಥಿನಿ



ಮೂಡಬಿದ್ರೆ ಪುತ್ತಿಗೆಯ ಪಿ ಶ್ರೀನಿವಾಸ ರಾವ್ ಮತ್ತು ಮಮತಾ ದಂಪತಿಗಳ ಪುತ್ರಿ ಭೂಮಿಕಾ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ 618 ಅಂಕ ಗಳಿಸಿ ಉತ್ತೀರ್ಣಳಾಗಿದ್ದಾಳೆ ಇವಳು ಆಳ್ವಾಸ್ ಆಂಗ್ಲ ಮಾಧ್ಯಮ ಶಾಲೆಯ ವಿದ್ಯಾರ್ಥಿನಿ



ಕೊಡವೂರು ಶ್ರೀ ಎಂ ಸುಬ್ರಹ್ಮಣ್ಯ ರಾವ್ ಮತ್ತು ಭಾರತೀ ಇವರ ಪುತ್ರಿ ಶ್ರೇಯ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ 93.12 ಶೇಕಡಾ ಅಂಕ ಗಳಿಸಿರುತ್ತಾಳೆ. ಇವಳು ಮಲ್ಪೆ ಶ್ರೀ ನಾರಾಯಣಗುರು ಆಂಗ್ಲ ಮಾಧ್ಯಮ ಶಾಲೆಯ ವಿದ್ಯಾರ್ಥಿನಿ



ಕಾರ್ಕಳ ಶ್ರೀ ಪಿ. ಹರೀಶ್ಚಂದ್ರ ರಾವ್ ಮತ್ತು ವಂದನಾರಾವ್ ದಂಪತಿಗಳ ಪುತ್ರ ರಕ್ಷಿತ್ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ 91.5 ಶೇಕಡಾ ಅಂಕ ಗಳಿಸಿರುತ್ತಾನೆ ಇವನು ಕಾರ್ಕಳ ಶ್ರೀ ಭುವನೇಂದ್ರ ಹೈಸ್ಕೂಲಿನ ವಿದ್ಯಾರ್ಥಿ

## ಕ್ರಿಕೆಟ್ ಪ್ರತಿಭೆ ಕುಮಾರಿ ತಾನ್ಯಾ



ಪ್ರಸ್ತುತ ರಾಜಕೋಟ್‌ನಲ್ಲಿ ನೆಲೆಸಿರುವ ಶ್ರೀಮತಿ ರಾಜಶ್ರೀ ಹಾಗೂ ಮಂಜುನಾಥ ರಾವ್ ದಂಪತಿಗಳ ಪುತ್ರಿ ಕುಮಾರಿ ತಾನ್ಯಾ ಭರವಸೆಯ ಮಹಿಳಾ ಕ್ರಿಕೆಟ್ ಪ್ರತಿಭೆಯಾಗಿ ಮೂಡಿ ಬರುತ್ತಿದ್ದಾಳೆ. ಸದ್ಯ ಎಂಜಿನಿಯರಿಂಗ್ ವಿದ್ಯಾರ್ಥಿನಿಯಾಗಿರುವ ಅವರು ಸೌರಾಷ್ಟ್ರ ತಂಡಕ್ಕೆ ನಾಯಕಿಯಾಗಿ ಜಯವನ್ನು ತಂದುಕೊಟ್ಟು ತನ್ನ ಸಾಮರ್ಥ್ಯವನ್ನು ಪ್ರದರ್ಶಿಸಿದ್ದಾರೆ. 19ಕ್ಕಿಂತ ಕಿರಿಯರ ತಂಡದಲ್ಲಿ ರಾಜ್ಯಮಟ್ಟದಲ್ಲಿ ಪ್ರತಿನಿಧಿಸಿ ಶತಕ ಬಾರಿಸಿದ ಏಕೈಕ ಆಟಗಾರ್ತಿ ಎಂಬ ಹೆಗ್ಗಳಿಕೆ ಅವರದ್ದು. ಭರತನಾಟ್ಯ ಕಲಾವಿದೆಯೂ ಆಗಿರುವ ಅವರು ರಾಷ್ಟ್ರಿಯ ತಂಡಕ್ಕೆ ಆಯ್ಕೆಯಾಗುವ ಸಾಧನೆಯನ್ನು ಮಾಡಬೇಕು ಎಂಬ ಮಹದಿಚ್ಛೆಯನ್ನು ಹೊಂದಿದ್ದಾರೆ. ಇವರು ನಂದಿಕೂರು ಶ್ರೀ ಎಸ್.ದೇವರಾವ್ ಮತ್ತು ಶ್ರೀಮತಿ ಸರೋಜಿನಿ ರಾವ್‌ರವರ ಪೌತ್ರಿ ಹಾಗೂ ಶ್ರೀ ಜನಾರ್ದನರಾಯರ ತಮ್ಮನ ಮಗಳು. ಕುಮಾರಿ ತಾನ್ಯಾಳಿಗೆ ಶ್ರೀ ಶಾರದಾ ಬಳಗದಿಂದ ಶುಭಕಾಮನೆಗಳು.

## ರೋಟರಿ ಅಧ್ಯಕ್ಷರಾಗಿ ಪ್ರಭಾಕರ ಭಂಡಿ



ಪೆರ್ಡೂರಿನ ರೋಟರಿ ಕ್ಲಬ್ ಅಧ್ಯಕ್ಷರಾಗಿ ಶ್ರೀ ಪ್ರಭಾಕರ ಭಂಡಿ ಆಯ್ಕೆಯಾಗಿದ್ದಾರೆ. ಇವರು ಪೆರ್ಡೂರಿನ ನಿವೃತ್ತ ಮುಖ್ಯೋಪಾಧ್ಯಾಯ ಹರಿನಾರಾಯಣ ಭಂಡಿ ಹಾಗೂ ಕುಸುಮಾ ದಂಪತಿಗಳ ಪುತ್ರ. ಇವರು ಮಣಿಪಾಲ ಪದವಿಪೂರ್ವ ಕಾಲೇಜಿನಲ್ಲಿ ಉಪನ್ಯಾಸಕರಾಗಿದ್ದಾರೆ. ಉಡುಪಿಯ ಸ್ಥಾನಿಕ ಬ್ರಾಹ್ಮಣ ಸಂಘ ರಿ., ಕುಂಜಿಬೆಟ್ಟು ಇದರಲ್ಲಿ ಜೊತೆ ಕಾರ್ಯದರ್ಶಿಯಾಗಿಯೂ ಹಾಗೂ ಶ್ರೀಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯಲ್ಲಿ ನಿರ್ದೇಶಕರಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ. ಈ ಹಿಂದೆ ಯುವಕ ಸಂಘ ಪೆರ್ಡೂರು ಇದರ ಅಧ್ಯಕ್ಷರಾಗಿಯೂ, ರೋಟರಿ ಕ್ಲಬ್‌ನ ಕಾರ್ಯದರ್ಶಿಯಾಗಿಯೂ ಸೇವೆ ಸಲ್ಲಿಸಿದ್ದಾರೆ.

## ಹುಟ್ಟು ಹಬ್ಬದ ಆಚರಣೆ



ಮಂಗಳೂರು ಸುಬ್ರಹ್ಮಣ್ಯ ಸಭಾದ ಅಧ್ಯಕ್ಷರಾದ ಕೇದಗೆ ಹರ್ಷಕುಮಾರ್‌ರವರಿಗೆ 70 ವರ್ಷ ಹಾಗೂ ಶ್ರೀಮತಿ ಕನಕವಲ್ಲಿ ಅವರಿಗೆ 60 ವರ್ಷ ಪೂರ್ತಿಯಾದ ಸಂದರ್ಭವನ್ನು ವಿವಿಧ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ನೆಂಟರಿಷ್ಟರೊಡಗೂಡಿ ಸಂಭ್ರಮದಿಂದ ಆಚರಿಸಿದರು. ಆ ಸಂದರ್ಭದಲ್ಲಿ ದಂಪತಿಗಳನ್ನು ಕೇದಿಗೆ ಹಾಗೂ ತಲೇಕಿ ಕುಟುಂಬಸ್ಥರು ಸನ್ಮಾನಿಸಿದರು.

## ವೃತ್ತಿಯಿಂದ ನಿವೃತ್ತಿ



ನಮ್ಮ ಸಂಘದ ನಿಕಟಪೂರ್ವ ಕಾರ್ಯದರ್ಶಿ ಹಾಗೂ ನಿವೃತ್ತ ಗಡಿಭದ್ರತಾ ಪಡೆಯ ಯೋಧ ಶ್ರೀ ಕೆ. ಸುರೇಶರಾಯರ ಪತ್ನಿ ಶ್ರೀಮತಿ ನಾಗವಲ್ಲಿಯವರು ಕರ್ನಾಟಕ ಸರಕಾರದ ಆಯುಷ್ ವಿಭಾಗದ ಅನುದಾನಕ್ಕೊಳಪಟ್ಟ ಉಡುಪಿಯ ಶ್ರೀ ಧರ್ಮಸ್ಥಳ ಆಯುರ್ವೇದ ಕಾಲೇಜು ಹಾಗೂ ಆಸ್ಪತ್ರೆ, ಕುತ್ಪಾಡಿ, ಇಲ್ಲಿ 42 ವರ್ಷಗಳ ಸುದೀರ್ಘ ಸೇವೆಯ ನಂತರ ಪತ್ರಾಂಕಿತ ಹುದ್ದೆಯಿಂದ ತಾ.31.05.2019ರಂದು ವಯೋನಿವೃತ್ತಿ ಹೊಂದಿದರು. ಆ ಸಂದರ್ಭದಲ್ಲಿ ಕಾಲೇಜಿನವರು ಹೃದಯಸ್ಪರ್ಶಿಯಾಗಿ ಬೀಳ್ಕೊಟ್ಟರು. ಶ್ರೀಮತಿಯವರು ನಮ್ಮ ಶ್ರೀ ಶಾರದಾ ಭಜನಾಮಂಡಳಿಯ ಸಕ್ರಿಯ ಸದಸ್ಯೆ ಹಾಗೂ ಮಹಿಳಾವೇದಿಕೆಯಲ್ಲೂ ಸಕ್ರಿಯವಾಗಿದ್ದಾರೆ. ಅವರ ನಿವೃತ್ತ ಜೀವನವು ಇನ್ನಷ್ಟು ಸಮಾಜ ಸೇವೆಗೆ ಮೀಸಲಾಗಿರಲಿ ಎಂದು ಹಾರೈಸುತ್ತೇವೆ.

## ಶ್ರೀ ಸುಕುಮಾರ ಆಲಂಪಾಡಿಯವರಿಗೆ ಸನ್ಮಾನ



ಸುಮಾರು ಐದು ಜ್ಯೋತಿಷ್ಯ ಶಾಸ್ತ್ರದ ಅಮೂಲ್ಯ ಗ್ರಂಥಗಳನ್ನು ಕನ್ನಡದಲ್ಲಿ ರಚಿಸಿ ವಿಶೇಷ ಕೊಡುಗೆಯನ್ನು ನೀಡಿರುವ ಜ್ಯೋತಿಷ್ಯ ವಿದ್ವಾನ್ ಶ್ರೀ ಸುಕುಮಾರ ಆಲಂಪಾಡಿಯವರನ್ನು ಪುತ್ತೂರಿನಲ್ಲಿ ಸನ್ಮಾನಿಸಲಾಯಿತು. ಅವರ ಈ ಗ್ರಂಥಗಳು ಇದೀಗ ಲಂಡನ್‌ನಲ್ಲಿ ಆಂಗ್ಲಭಾಷೆಗೆ ತರ್ಜುಮೆಗೊಳ್ಳುತ್ತಿವೆ. ಇಳಂತೋಡಿ ಎ.ಸಿ.ಸದಾನಂದ ರಾಯರ ಸ್ಮರಣಾರ್ಥ ಈ ಕಾರ್ಯಕ್ರಮವು ನಡೆಯಿತು. ವೇದಿಕೆಯಲ್ಲಿ ಶ್ರೀ ಎಮ್.ಆರ್.ವೆಂಕಟೇಶ ಶಾಸ್ತ್ರಿಗಳು, ದಿ| ಎ.ಸಿ. ಸದಾನಂದ ರಾಯರ ಪತ್ನಿ ಸ್ವರ್ಣಲತಾ ಉಪಸ್ಥಿತರಿದ್ದರು. ಅಧ್ಯಾಪಕ ಶ್ರೀನಿವಾಸ ರಾಯರು ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀಮತಿ ಜಯಶ್ರೀ ಅಭಿನಂದನಾ ಪತ್ರವನ್ನು ವಾಚಿಸಿದರು. ಶ್ರೀಯುತ ಸುಕುಮಾರ ಆಲಂಪಾಡಿಯವರು ತಾನು ಸ್ವತ: ಅಧ್ಯಯನಗೈದು "ಫಲ ಜ್ಯೋತಿಷ್ಯ"ದ ಕರಾರುವಾಕ್ ವಿವರಗಳನ್ನು ಪುಸ್ತಕದಲ್ಲಿ ನೀಡಿದ್ದರಿಂದ ಕಲಿಕಾಸಕ್ತರಿಗೆ ಪ್ರಿಯವಾಗಿದೆ ಎಂದರು. ಶ್ರೀಮತಿ ಶ್ರುತಿ ಕಾರ್ಯಕ್ರಮ ನಿರೂಪಿಸಿದರು. ಶ್ರೀ ಶ್ರೇಯಸ್ ವಂದನಾರ್ಪಣೆ ಮಾಡಿದರು.

## ಶ್ರದ್ಧಾಂಜಲಿ



**ವಸಂತ ವಾಮನ ರಾವ್ ಕುಂಜಾರು**

ಮಾಲಕರು, ಸೋನಾ ಲಾಡ್ಜಿಂಗ್ ಹಾಗೂ ಬೋರ್ಡಿಂಗ್, ಕೊರೆಗಾಂವ್, ಸತಾರ

(ಜನನ : 22-07-1978 ನಿಧನ : 07-05-2019)

ಅಕಾಲಿಕವಾಗಿ ನಿಧನ ಹೊಂದಿದ ನಿಮ್ಮ ಆತ್ಮಕ್ಕೆ ಚಿರಶಾಂತಿ ಮತ್ತು ಸದ್ಗತಿಯನ್ನು ಭಗವಂತನು ಕರುಣಿಸಲಿ ಎಂದು ಪ್ರಾರ್ಥಿಸುವ,

ವಾಮನ ರಾವ್ ಕುಂಜಾರು (ತಂದೆ)
ವಿಮಲಾ ವಿ.ರಾವ್ ಕುಂಜಾರು (ತಾಯಿ)
ಚೈತ್ರ ವಸಂತ ರಾವ್ ಕುಂಜಾರು (ಪತ್ನಿ)
ವೇದಾಂತ ವಸಂತ ರಾವ್ ಕುಂಜಾರು (ಮಗ)
ಸೋನಾಲಿ ರಂಗನಾಥ ರಾವ್ ಬೆಂಗಳೂರು (ತಂಗಿ)
ರಾಘವೇಂದ್ರ ವಿ.ರಾವ್ ಕುಂಜಾರು (ತಮ್ಮ)
ಲೀಲಾ ವಿ.ರಾವ್ ಮುಂಬಯಿ (ಚಿಕ್ಕಮ್ಮ)
ಮಂಜುನಾಥ ರಾವ್ ಕುಂಜಾರು, ಮುಂಬಯಿ (ತಮ್ಮ)
ನರಸಿಂಹ ರಾವ್ ಕುಂಜಾರು, ದೊಡ್ಡಣಗುಡ್ಡೆ, ಉಡುಪಿ (ಚಿಕ್ಕಪ್ಪ)
ಶೋಭಾ ಸಿ.ರಾವ್ ಉದ್ಯಾವರ (ಅತ್ತೆ)

# ನಾಲೂರು ಶ್ರೀ ಶಂಕರನಾರಾಯಣ ದೇವಸ್ಥಾನದ ಪುನರ್ ಪ್ರತಿಷ್ಠೆ



ನಮ್ಮ ಸಮಾಜದ ಆಡಳಿತದಲ್ಲಿರುವ ಕುಂಭಾಟ್ ಮನೆತನಕ್ಕೆ ಸೇರಿದ ಸುಮಾರು ಹನ್ನೆರಡನೆಯ ಶತಮಾನದ ದೇವಸ್ಥಾನವಾದ ಪುತ್ತೂರು ತಾಲೂಕಿನ ಕುಟ್ರುಪಾಡಿ ಗ್ರಾಮದ ನಾಲೂರು ಶ್ರೀ ಶಂಕರನಾರಾಯಣ ದೇವಸ್ಥಾನದ ಸಮಗ್ರ ಜೀರ್ಣೋದ್ಧಾರ ಕಾರ್ಯವು ಕುಂಬಾಟ್ ಶ್ರೀ ಜ್ಞಾನೇಶ ರಾಯರ ನೇತೃತ್ವದಲ್ಲಿ ನಡೆದಿದ್ದು ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಗಳ ನೇತೃತ್ವದಲ್ಲಿ ಪುನರ್ ಪ್ರತಿಷ್ಠೆ ಬ್ರಹ್ಮಕಲಶೋತ್ಸವ ಸಮಾರಂಭಗಳು ತಾ.08.05.2019ರಿಂದ ತಾ.13.05.2019ರ ತನಕ ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಗಳ ಅಧ್ವರ್ಯುತನದಲ್ಲಿ ವಿಜೃಂಭಣೆಯಿಂದ ನೆರವೇರಿದವು. ಹೆಬ್ಬೂರು ಶ್ರೀ ಕೋದಂಡಾಶ್ರಮ ಮಠದ ಪೀಠಾಧಿಪತಿಗಳಾದ ಶ್ರೀ ಶ್ರೀ ಮಾಧವಾಶ್ರಮ ಸ್ವಾಮೀಜಿಗಳವರು ಬ್ರಹ್ಮಕಲಶೋತ್ಸವವನ್ನು ನೆರವೇರಿಸಿದರು. ಬ್ರಹ್ಮಕಲಶೋತ್ಸವದ ದಿನ ದೇವಳದಲ್ಲಿ ಉಡುಪಿಯ ಡಾ। ವಿದ್ಯಾ ಎಸ್ ರಾವ್ ರವರಿಂದ ಭಕ್ತಿಗಾನಸುಧಾ ಕಾರ್ಯಕ್ರಮವು ಸಮರ್ಪಿತವಾಯಿತು. ನಂತರ ಶ್ರೀ ಶಾರದಾ ಭಜನಾ ಮಂಡಳಿ ಉಡುಪಿ ಇವರಿಂದ ಭಜನಾ ಕಾರ್ಯಕ್ರಮವೂ ನೆರವೇರಿತು. ಎರಡೂ ಕಾರ್ಯಕ್ರಮಗಳಿಗೆ ಬ್ರಹ್ಮಾವರದ ಡಾ.ರವೀಂದ್ರನಾಥ ರಾವ್‌ರವರು ಹಾರ್ಮೋನಿಯಂನಲ್ಲೂ ಪೊಳಲಿಯ ಶ್ರೀ ಹರಿಕೃಷ್ಣ ಇವರು ತಬಲಾದಲ್ಲೂ ಸಾಥ್ ನೀಡಿದರು. ಡಾ। ವೈ ಸುದರ್ಶನ್ ರಾವ್ ಇವರ ನೇತೃತ್ವದಲ್ಲಿ ಉಡುಪಿಯಿಂದ ಸಮಾಜಬಾಂಧವರು ತೆರಳಿದ್ದರು.



ನಾಲೂರಿನಲ್ಲಿ ಉಡುಪಿಯ ಭಕ್ತರ ತಂಡ


## ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)

ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101. ಫೋನ್ : 2522408

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ "ಗೃಹ ಸಾಲ" ಸಂಘದ ಪ್ರಾಥಮಿಕ ಸದಸ್ಯರಿಗೆ 11.50% (ಷರತ್ತುಗಳು ಅನ್ವಯ)

| | | |
|---|---|---|
| ವಾಹನ ಸಾಲ | : | 12.5% |
| ಹಳೆಯ ವಾಹನ | : | 14% |
| ಆಭರಣ ಸಾಲ | : | 12.5% |
| ವೈಯಕ್ತಿಕ ಸಾಲ | : | 16% |
| ಶಿಕ್ಷಣ ಸಾಲ | : | 12% |
| ಅಡಮಾನ ಸಾಲ | : | 13% |

ಠೇವಣಿಗಳ ಬಡ್ಡಿದರ

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | : 5% |
| 46 ದಿನಗಳಿಂದ 364 ದಿನಗಳು | : 6%, | 1 ವರ್ಷ ಮತ್ತು ಹೆಚ್ಚಿನ ಅವಧಿಗೆ | : 9% |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

2011-12ರಿಂದ 2016-17ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸಂಘದ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಉಳಿತಾಯ ಖಾತೆಗೆ ಜಮೆ ಮಾಡಲಾಗುವುದು.

ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ

ಪ್ರಧಾನ ಕಛೇರಿ (☎ 2522408) ಕುಕ್ಕಿಕಟ್ಟೆ ಶಾಖೆ (☎ 2592133) ಪಡುಬಿದ್ರಿ ಶಾಖೆ (☎ 2556608) ಕೋಟೇಶ್ವರ ಶಾಖೆ (☎ 9341854114)



With Best Compliments From :




9845084866, 9880742159, 9886199769
1st Floor, New Milagres Mansion, Falnir Road, Mangalore - 575001
info@landtrades.in
sales@landtrades.in
Ph: 0824 2425424
www.landtrades.in
CRISIL DA3+



With Best Compliments From :

***Rajathadri Hotel Pvt. Ltd.
Lodging & Boarding

Sri Ramesh Shanubhag, Usha, Sanketh and Kavitha
Directors




OUR FACILITIES
★ A/c Rooms ★ Deluxe Rooms ★ 3, 4, 5 Cot Rooms
★ Room Service ★ T.V. with Cable Connection ★ Hot Water

SHIVAJI CIRCLE, POWAI NAKA, SATARA-415001
Ph : 02162-234017, 233818
Fax : 02162-233885 E-mail : rajathadri.satara@gmail.com


Owned, Published & Edited by : Sri Y. Muralikrishna Rao onbehalf of Sri Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Designed & Printed @ SriNidhi Computer Graphics, Rajataadri, Manipal. E-mail : srisharadaudupi@gmail.com Website : www.srisharada.org